The Company requested for sanction of special incentives for which the 20th State High Level Clearance Committee (SHLCC) in its meeting held on 05-01-2010 has approved and recommended to the Government. Government has examined the recommendations made by the State High Level Clearance Committee and after examining the proposal in detail was pleased to sanction certain special incentives and concessions for both the projects i.e. Belgaum District and Gulbarga District. Vide G.O. No. CI 01 SPI 2009 dated 10-02-2010.

The special incentives and concessions were sanctioned with an intention of promoting large investments in the backward areas and generate employment opportunity to youths.

Now the Government has examined the status of the two investment proposals of M/s Dalmia Cement Ventures Ltd., and it is observed that the progress is not satisfactory. After detailed consideration, it is decided to withdraw the G.O. No. CI 01 SPI 2009 dated 10-02-2010. Hence the following Order.

GOVERNMENT ORDER NO. CI 1 SPI 2009, BANGALORE, DATED : 18-03-2011.

In the circumstances explained above, the special incentives and concessions sanctioned vide G.O. CI 01 SPI 2009 dated 10-02-2010 read at (8) above are withdrawn with immediate effect.

This Order is issued with the concurrence of Finance Department vide its U.O. Note No. FD 7 CSL 2011 dated 15-02-2011.

By Order and in the name of the Governor of Karnataka

A.V. Srinivasa Dikshit

P.R. 877

Desk Officer (Technical Cell),
Commerce and Industries Department.

ಶಿಕ್ಷಣ ಸಚಿವಾಲಯ

ವಿಷಯ : ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಶನ್ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ ಅಪೆಕ್ಸ್ ಕ್ರಿಯೇಟಿವಿಟಿ ಕ್ಯಾಂಪಸ್ ಮತ್ತು ರಿಸೋರ್ಸ್‌ಸೆಂಟರ್, ಒಂದು ಇಂಟಿಗ್ರೇಟೆಡ್ ಮೆಗಾ ಸೈನ್ಸ್ ಸೆಂಟರ್ ಹಾಗೂ ನಾಲ್ಕು ಕೋರ್ ಸೈನ್ಸ್ ಸೆಂಟರ್‌ಗಳನ್ನು ಸ್ಥಾಪಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಇಡಿ 422 ಎಂಸಿಡಿ 2009 ದಿನಾಂಕ : 26–03–2010.
2. ಸರ್ಕಾರದ ಆದೇಶ ಸಂಖ್ಯೆ : ಇಡಿ 422 ಎಂಸಿಡಿ 2009 ದಿನಾಂಕ : 17–03–2011.

ಪ್ರಸ್ತಾವನೆ:

1. ಮೇಲೆ (1)ರಲ್ಲಿ ಓದಲಾದ ದಿನಾಂಕ : 26–03–2010ರ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿ ಶಾಲಾಶಿಕ್ಷಣ ಹಂತದಲ್ಲಿ ವಿಜ್ಞಾನ ಶಿಕ್ಷಣವನ್ನು ವ್ಯಾಪಕವಾಗಿ ಹಮ್ಮಿಕೊಂಡು ಅಭಿವೃದ್ಧಿ ಪಡಿಸಲು ಅದರಲ್ಲೂ ವಿಶೇಷವಾಗಿ ಶೈಕ್ಷಣಿಕವಾಗಿ ಹಿಂದುಳಿದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಅಭಿವೃದ್ಧಿಪಡಿಸಲು ಹುಬ್ಬಳ್ಳಿ–ಧಾರವಾಡದಲ್ಲಿ ಇಂಟಿಗ್ರೇಟೆಡ್ ಮೆಗಾ ವಿಜ್ಞಾನಕೇಂದ್ರ ಸ್ಥಾಪನೆ ಮತ್ತು ಉತ್ತರ ಕರ್ನಾಟಕದಲ್ಲಿ ಮೂರು ಕೋರ್ ಸೆಂಟರ್‌ಗಳು ಹಾಗೂ ಶಿವಮೊಗ್ಗದಲ್ಲಿ ಒಂದು ಸೆಂಟರ್ ಹೀಗೆ ಒಟ್ಟು 4 ಸೆಂಟರ್‌ಗಳನ್ನು ಸ್ಥಾಪಿಸಲು ಮತ್ತು ಅಪೆಕ್ಸ್ ಕ್ರಿಯೇಟಿವಿಟಿ ಕ್ಯಾಂಪಸ್‌ನ್ನು 25 ಎಕರೆ ಜಮೀನಿನಲ್ಲಿ ಅಂದಾಜು ಮೊತ್ತ ರೂ. 13.00 ಕೋಟಿಗಳ ವೆಚ್ಚದಲ್ಲಿ ಸ್ಥಾಪಿಸಲು, ಹುಬ್ಬಳ್ಳಿ–ಧಾರವಾಡದಲ್ಲಿ 5 ರಿಂದ 10 ಎಕರೆ ಜಮೀನಿನಲ್ಲಿ ಇಂಟಿಗ್ರೇಟೆಡ್ ಮೆಗಾ ವಿಜ್ಞಾನ ಕೇಂದ್ರ ಸ್ಥಾಪಿಸಲು ಮತ್ತು ಪ್ರತಿ ಕೋರ್ ಸೆಂಟರ್‌ಗೆ 1 ರಿಂದ 2 ಎಕರೆ ಜಮೀನಿನಲ್ಲಿ ಒಟ್ಟು 4 ಕೋರ್ ಸೆಂಟರ್‌ಗಳನ್ನು ಒಟ್ಟು ರೂ. 7.00 ಕೋಟಿಗಳ ವೆಚ್ಚದಲ್ಲಿ ಸ್ಥಾಪಿಸಲು ಹಾಗೂ ಮೇಲ್ಕಂಡ ಕಾಮಗಾರಿಗಳ ಉಸ್ತುವಾರಿಗಾಗಿ ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು ಇವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿ ಆದೇಶ ಹೊರಡಿಸಲಾಗಿತ್ತು.

2. ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನರವರು ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಶನ್‌ಯವರೊಂದಿಗೆ ಒಡಂಬಡಿಕೆ (MoU) ಯನ್ನು ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

3. ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು 2011–12ನೇ ಸಾಲಿಗೆ ಆಯವ್ಯಯ ಲೆಕ್ಕ ಶೀರ್ಷಿಕೆ 2202–80–800–0–40–059 (ಯೋ) ಅಡಿಯಲ್ಲಿ 500.00 ಲಕ್ಷ ರೂ.ಗಳನ್ನು ಒದಗಿಸಿದ್ದು, ಅದನ್ನು ಬಿಡುಗಡೆ ಮಾಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಡಿ 422 ಎಂಪಿಡಿ 2009, ಬೆಂಗಳೂರು, ದಿನಾಂಕ: 23–03–2011

(ಇಡಿ. 24 : ಸ್ಪೀಮರ (ಯುನಿಕ್) 2011, 23–03–2011)

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2011–12ನೇ ಸಾಲಿಗೆ ಆಯವ್ಯಯ ಲೆಕ್ಕ ಶೀರ್ಷಿಕೆ 2202–80–800–0–40–059 (ಯೋ) ಅಡಿಯಲ್ಲಿ ಒದಗಿಸಿರುವ ರೂ. 500.00 ಲಕ್ಷ (ಐದನೂರು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಅಗಸ್ತ್ಯ ಇಂಟರ್‌ನ್ಯಾಷನಲ್ ಫೌಂಡೇಶನ್ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ ಅಪೆಕ್ಸ್ ಕ್ರಿಯೇಟಿವಿಟಿ ಕ್ಯಾಂಪಸ್ ಮತ್ತು ರಿಸೋರ್ಸ್ ಸೆಂಟರ್, ಒಂದು ಇಂಟಿಗ್ರೇಟೆಡ್ ಮೆಗಾ ಸೈನ್ಸ್ ಸೆಂಟರ್ ಹಾಗೂ ನಾಲ್ಕು ಕೋರ್ ಸೈನ್ಸ್ ಸೆಂಟರ್‌ಗಳನ್ನು ಸ್ಥಾಪಿಸಲು ರಾಜ್ಯ ಯೋಜನಾ ನಿರ್ದೇಶಕರು ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು ಇವರಿಗೆ ಮೇಲೆ ಓದಲಾದ ಎರಡೂ ಆದೇಶಗಳಲ್ಲಿರುವ ಷರತ್ತುಗಳನ್ನು ಪಾಲಿಸಲು ತಿಳಿಸಿ ಅನುದಾನವನ್ನು ಬಿಡುಗಡೆ ಮಾಡಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿದೆ.

ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನರವರು ಈ ಕಾರ್ಯಕ್ರಮದ ಖರ್ಚು ವೆಚ್ಚಗಳ ಬಗ್ಗೆ ಪ್ರತ್ಯೇಕ ಲೆಕ್ಕ ಪತ್ರಗಳನ್ನು ಇಡುವಂತೆ ಸೂಚನೆ ನೀಡಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಎಫ್‌ಡಿ 328 ವೆಚ್ಚ 8/2011 ದಿನಾಂಕ : 21–03–2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಐ.ಎಫ್. ಮಾಗಿ

ವಿಶೇಷಾಧಿಕಾರಿ ಹಾಗೂ ಪ.ನಿ.

ಪಿ.ಆರ್. 878

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಯೋಜನೆ)

INFRASTRUCTURE DEVELOPMENT SECRETARIAT

Sub: Link Road to Bellary Airport from Hospet side.

Read :
1. G.O. No. IDD 120 DIA 2008 dated 06-10-2008.
2. Letter No. BUDA/IDD/2011 dated : 14-02-2011 of Chairman, BUDA, Bellary.

PREAMBLE :

In G.O. dated 06-10-2008 read at S.No. (1) above sanction was accorded for establishment of a new airport at Bellary through Public Private Partnership (PPP) on BoT basis on certain terms and conditions.

In letter dated 14-02-2001 of chairman, BUDA Bellary read at Sl.No. (2) above sought permission to plan and execute proposed 2 lane connectivity road connecting Hospet road to Gooty-Ananthpur Road crossing Siraguppa road to provide connectivity to New Airport and other Industrial Hubs on the Northern side of the Bellary City at an estimated cost of Rs. 137.13 crores. Further it is stated that BUDA will take assistance of PWD for quality certification of the project work supervised by Project Management consultants appointed by BUDA.

The Proposal of BUDA has been examined by the Government and hence the following order.

GOVERNMENT ORDER NO. IDD 20 DIA 2011 (P), BANGALORE, DATED : 21-03-2011.

In the circumstances explained in the preamble, Sanction is accorded for the following :-

a) To take up works creating bypass road in Bellary city to provide connectivity to Bellary Airport from Hospet side.
b) To limit the expenditure on road works to Rs. 2.6 crores per km for the total length of 24.85 km of road works to the extent of Rs. 64.61 crores.
c) To restrict remaining expenditure on works such as ROB, Traffic Signages, road markings, drainage and protection works, electrical works etc Amounts to Rs. 45.39 crores.
d) To incur total expenditure of Rs. 110.00 crores for this project.
e) The expenditure on the project to be met under the Head of Account 5465-01-190-2-05 Alternate Roads for giving connectivity to the Airport.
f) BUDA to acquire lands for this project out of its sources.
g) BUDA to implement the works, PWD to monitor the same and issue a completion certificate in this regard.
h) To constitute a committee under the Chairmanship of Deputy Commissioner, Bellary, including the Executive Engineer, PWD Commissioner BUDA, for reviewing the road construction works.

This order is issued in the public interest pending approval by the cabinet.

By Order and in the name of the Governor of Karnataka

C.A. Baburavindranath Patel

P.R. 879

Under Secretary to Government,

Infrastructure Development Department.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಸಂಖ್ಯೆ : ಸಿಆಸುಇ 458 ಸಅಸೇ 2008, ಬೆಂಗಳೂರು ದಿನಾಂಕ : 22-03-2011

ತಿದ್ದುಪಡಿ

ಕರ್ನಾಟಕ ಸರ್ಕಾರ ಸಚಿವಾಲಯದ ಗ್ರೂಪ್–ಎ ಹುದ್ದೆಗಳ ಸೃಜನೆ ಹಾಗೂ ಉನ್ನತೀಕರಣಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 458 ಸಅಸೇ 2008, ದಿನಾಂಕ : 25–02–2011ರ ಆದೇಶದಲ್ಲಿ ಉನ್ನತೀಕರಿಸಲಾದ ಹುದ್ದೆಯ ಕ್ರಮ ಸಂಖ್ಯೆ (3)ರಲ್ಲಿನ ಸರ್ಕಾರದ ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸೇವೆಗಳು) ಎಂಬುದಕ್ಕೆ ಬದಲಾಗಿ **ಸರ್ಕಾರದ ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ (ಆಡಳಿತ)** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಆರ್. ವಿಜಯಾನಂದ ಶರ್ಮ

ಪಿ.ಆರ್. 880

ಸರ್ಕಾರದ ಅಧೀನ ಕಾರ್ಯದರ್ಶಿ

ಸಿ.ಆ.ಸು. ಇಲಾಖೆ (ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ಇನ್‌ಸ್ಟಿಟ್ಯೂಟ್ ಫಾರ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್ ಟ್ರಸ್ಟ್ ಇವರಿಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಹೊಸಕೆರೆಹಳ್ಳಿ ಗ್ರಾಮದ ಸ.ನಂ. 7ರಲ್ಲಿ 7.05 ಎಕರೆ ಜಮೀನನ್ನು ಮಂಜೂರು ಮಾಡಿರುವುದನ್ನು ರದ್ದುಪಡಿಸಿ 7.00 ಎಕರೆ ಜಮೀನನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 612 ಎಲ್‌ಜಿಬಿ 2008, ದಿನಾಂಕ : 17–05–2010.
2. ರಾಜರಾಜೇಶ್ವರಿ ನಗರ ವಿಧಾನ ಸಭಾ ಕ್ಷೇತ್ರದ ಶಾಸಕರ ಪತ್ರ ದಿನಾಂಕ: 10–07–2010.
3. ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ (ಎಸ್) ಸಿಆರ್ 50/07–08, ದಿನಾಂಕ: 01–07–2010 ಮತ್ತು 09–09–2010.

ಪ್ರಸ್ತಾವನೆ:

ದಿನಾಂಕ: 29–04–2010 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ವಿಷಯ ಸಂಖ್ಯೆ: ಸಿ 40/2010ರಲ್ಲಿ ಕೈಗೊಂಡ ನಿರ್ಣಯದಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (1) ದಿನಾಂಕ: 17–05–2010ರ ಸರ್ಕಾರದ ಆದೇಶದಲ್ಲಿ ಬೆಂಗಳೂರು ಇನ್‌ಸ್ಟಿಟ್ಯೂಟ್ ಫಾರ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್ ಟ್ರಸ್ಟ್ ಇವರಿಗೆ ಹೊಸಕೆರೆಹಳ್ಳಿ ಸ.ನಂ. 7ರಲ್ಲಿ 7.05 ಎಕರೆ ಜಮೀನನ್ನು ಬದಲಿ ಜಮೀನನ್ನಾಗಿ ಪ್ರಸ್ತುತ ಮಾರ್ಗಸೂಚಿ ಬೆಲೆಯ ಶೇಕಡ 50 ರಷ್ಟನ್ನು ವಿಧಿಸಿ ಮಂಜೂರು ಮಾಡಲು ಹಾಗೂ ಬೆಂಗಳೂರು ಇನ್‌ಸ್ಟಿಟ್ಯೂಟ್ ಫಾರ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್ ಟ್ರಸ್ಟ್ ಇವರಿಗೆ ಈ ಹಿಂದೆ ಮಂಜೂರು ಮಾಡಲಾಗಿರುವ ಕುಂಬಳಗೋಡು ಗ್ರಾಮದ ಸ.ನಂ. 182 ರಲ್ಲಿನ 4 ಎಕರೆ ಜಮೀನನ್ನು ಪಂಚಶೀಲ ವೆಲ್‌ಫೇರ್ ಅಸೋಸಿಯೇಷನ್ ಇವರಿಗೆ ಪ್ರಸ್ತುತ ಮಾರ್ಗಸೂಚಿ ಬೆಲೆಯ ಶೇಕಡ 50ರಷ್ಟನ್ನು ವಿಧಿಸಿ ಮಂಜೂರು ಮಾಡಲಾಗಿರುತ್ತದೆ.

ಮಾನ್ಯ ವಿಧಾನ ಸಭಾ ಸದಸ್ಯರು, ರಾಜರಾಜೇಶ್ವರಿ ನಗರ ವಿಧಾನ ಸಭಾ ಕ್ಷೇತ್ರ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ: 10–06–2010ರ ಪತ್ರದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಹೊಸಕೆರೆಹಳ್ಳಿ ಗ್ರಾಮದ ಸ.ನಂ. 7ರಲ್ಲಿ ಸರ್ಕಾರಿ ಜಮೀನಿದ್ದು, ಈ ಜಮೀನನ್ನು ಉದ್ಯಾನವನಕ್ಕಾಗಿ ಮೀಸಲಿಟ್ಟಿರುವುದರಿಂದ ಈ ಜಮೀನನ್ನು ಪಾರ್ಕ್, ಸಾರ್ವಜನಿಕ ಆಸ್ಪತ್ರೆ, ಆಶ್ರಯ ಯೋಜನೆ ಇತರೆ ನಾಗರೀಕ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವಂತೆ ಕೋರಿರುತ್ತಾರೆ.

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (3) ದಿನಾಂಕ: 01–07–2010ರ ಪತ್ರದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಹೊಸಕೆರೆಹಳ್ಳಿ ಗ್ರಾಮದ ಸ.ನಂ. 7ರಲ್ಲಿನ ಜಮೀನು ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಪ್ಲಾನಿಂಗ್ ಅಥಾರಿಟಿ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸರ್ಕಾರದಿಂದ ಅನುಮೋದಿತ ಬಿ.ಎಂ.ಐ.ಸಿ.ಎ.ಪಿ.ಎ. ಮಾಸ್ಟರ್ ಪ್ಲಾನ್ ಪ್ರಕಾರ ಉದ್ಯಾನವನ ಮತ್ತು ಬಯಲು ವಲಯದಲ್ಲಿ ಕಾಯ್ದಿರಿಸಲಾಗಿದೆ ಹಾಗೂ ವಲಯ ನಿಯಮಾವಳಿ ಪ್ರಕಾರ ಉದ್ಯಾನವನ ಮತ್ತು ಬಯಲು ಪ್ರದೇಶ ವಲಯದಲ್ಲಿ ಶೈಕ್ಷಣಿಕ ಉದ್ದೇಶಕ್ಕಾಗಿ ಅವಕಾಶವಿರುವುದಿಲ್ಲವೆಂದು ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಇವರು ತಿಳಿಸಿರುವುದಾಗಿ ವರದಿ ಮಾಡಿರುತ್ತಾರೆ.

ಸದರಿ ಜಮೀನನ್ನು ಬಿ.ಎಂ.ಐ.ಸಿ.ಎ.ಪಿ.ಎ ಮಾಸ್ಟರ್ ಪ್ಲಾನ್ ಪ್ರಕಾರ ಉದ್ಯಾನವನ ಮತ್ತು ಬಯಲು ವಲಯದಲ್ಲಿ ಕಾಯ್ದಿರಿಸಿರುವುದರಿಂದ ಜೋನಲ್ ರೆಗ್ಯುಲೇಷನ್‌ಗೆ ವಿರುದ್ಧವಾಗಿ ಈ ಜಮೀನನ್ನು ಬೆಂಗಳೂರು ಇನ್‌ಸ್ಟಿಟ್ಯೂಟ್ ಫಾರ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್ ಟ್ರಸ್ಟ್ ಇವರಿಗೆ ಮಂಜೂರಾಗಿರುವುದರಿಂದ ಸದರಿ ಟ್ರಸ್ಟ್‌ಗೆ ಪರ್ಯಾಯ ಜಮೀನು ಗುರುತಿಸಿ ವರದಿ ಸಲ್ಲಿಸಲು ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆಗೆ ಇವರಿಗೆ ಸೂಚನೆ ನೀಡಲಾಗಿತ್ತು.

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ: 09–09–2010ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಬೆಂಗಳೂರು ಇನ್‌ಸ್ಟಿಟ್ಯೂಟ್ ಫಾರ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್ ಟ್ರಸ್ಟ್ ಇವರಿಗೆ ಮಂಜೂರು ಮಾಡಿರುವ ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ, ಹೊಸಕೆರೆಹಳ್ಳಿ ಗ್ರಾಮದ ಸ.ನಂ. 7ರಲ್ಲಿನ 7.05 ಎಕರೆ ಜಮೀನಿಗೆ ಬದಲಾಗಿ ಬೆಂಗಳೂರು ಪೂರ್ವ ತಾಲ್ಲೂಕ್, ವರ್ತೂರು ಹೋಬಳಿ, ಗುಂಜೂರು ಗ್ರಾಮದ ಸ.ನಂ. 109 ರಲ್ಲಿ 10 ಎಕರೆ ಜಮೀನು ಮಂಜೂರು ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಗುಂಜೂರು ಗ್ರಾಮದ ಸ.ನಂ. 109 ರಲ್ಲಿ ಒಟ್ಟು 30.35 ಎಕರೆ ಜಮೀನಿದ್ದು, ಈ ಜಮೀನು ಊರು ದನಗಳ ಮುಫತ್ ಕಾವಲ್ ಎಂದು ವರ್ಗೀಕರಣಗೊಂಡಿರುತ್ತದೆ. ಈ ಜಮೀನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುತ್ತದೆ. ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ಇವರು ದಿನಾಂಕ: 31–08–2010ರ ಪತ್ರದಲ್ಲಿ ಗುಂಜೂರು ಗ್ರಾಮದಲ್ಲಿ ವ್ಯವಸಾಯ ಜಮೀನುಗಳ ಮಾರ್ಗಸೂಚಿ ಬೆಲೆ ಎಕರೆಯೊಂದಕ್ಕೆ ರೂ. 50 ಲಕ್ಷಗಳಿದ್ದು, ಮಾರುಕಟ್ಟೆ ಬೆಲೆ ಎಕರೆಯೊಂದಕ್ಕೆ ರೂ. 2 ಕೋಟಿಗಳಿರುವುದಾಗಿ ತಿಳಿಸಿರುತ್ತಾರೆ ಹಾಗೂ ಮೇಲಿನ ಒಟ್ಟು ವಿಸ್ತೀರ್ಣ 30.35 ಎಕರೆ ಜಮೀನಿನ ಪೈಕಿ 5 ಎಕರೆ ಜಮೀನನ್ನು ಆಶ್ರಯ ಯೋಜನೆಗಾಗಿ, 20 ಗುಂಟೆ ಜಮೀನನ್ನು ಸಾರ್ವಜನಿಕ ರಸ್ತೆಗಾಗಿ ಕಾಯ್ದಿರಿಸಲಾಗಿದ್ದು, 7 ಎಕರೆ ಜಮೀನನ್ನು ಬಿ.ಎಂ.ಟಿ.ಸಿ.ಗೆ ಮಂಜೂರು ಮಾಡಲಾಗಿರುತ್ತದೆ. ಉಳಿಕೆ 18.15 ಎಕರೆ ಜಮೀನು ಖಾಲಿ ಇರುತ್ತದೆ. ಈ ಜಮೀನಿನಲ್ಲಿ ಅರಣ್ಯ ಇಲಾಖೆಯವರು ಮರಗಳನ್ನು ಬೆಳೆಸಿದ್ದು, ಆದರೆ ಈ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿರುವುದಿಲ್ಲವೆಂದು ವಿಶೇಷ ಜಿಲ್ಲಾಧಿಕಾರಿಗಳು ನೀಡಿರುವ ವರದಿಯಂತೆ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 517 ಎಲ್‌ಜಿಬಿ 2010, ಬೆಂಗಳೂರು, ದಿನಾಂಕ: 13–05–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಿ.ಎಂ.ಐ.ಸಿ.ಎ.ಪಿ.ಎ. ಮಾಸ್ಟರ್ ಪ್ಲಾನ್‌ನ ಜೋನಲ್ ರೆಗ್ಯುಲೇಷನ್‌ಗೆ ವಿರುದ್ಧವಾಗಿ ಬೆಂಗಳೂರು ಇನ್‌ಸ್ಟಿಟ್ಯೂಟ್ ಫಾರ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್ ಟ್ರಸ್ಟ್ ಇವರಿಗೆ ಹೊಸಕೆರೆಹಳ್ಳಿ ಸ.ನಂ. 7ರಲ್ಲಿ

ಮಂಜೂರಾಗಿರುವ 7.05 ಎಕರೆ ಜಮೀನನ್ನು ರದ್ದುಪಡಿಸಿ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಗುಂಜೂರು ಗ್ರಾಮದ ಸ.ನಂ. 109ರಲ್ಲಿ 7 ಎಕರೆ ಜಮೀನನ್ನು ಸದರಿ ಜಮೀನಿನ ಮಾರ್ಗಸೂಚಿ ಬೆಲೆಯ ಶೇ. 50ರಷ್ಟನ್ನು ವಿಧಿಸಿ ಮತ್ತು ನಿಯಮಾನುಸಾರ ಇತರೆ ಶುಲ್ಕಗಳನ್ನು ವಿಧಿಸಿ ಬೆಂಗಳೂರು ಇನ್ಸ್‌ಟಿಟ್ಯೂಟ್ ಫಾರ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್ ಟ್ರಸ್ಟ್ ಇವರಿಗೆ ಮಂಜೂರು ಮಾಡಿ ಆದೇಶಿಸಿದೆ.

ಮುಂದುವರೆದು ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ, ಹೊಸಕೆರೆಹಳ್ಳಿ ಗ್ರಾಮದ ಸ.ನಂ. 7ರಲ್ಲಿನ 7.05 ಎಕರೆ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 71ರ ಅಡಿಯಲ್ಲಿ ಪಾರ್ಕ್, ಸಾರ್ವಜನಿಕ ಆಸ್ಪತ್ರೆ ಆಶ್ರಯ ಯೋಜನೆ ಹಾಗೂ ಇತರೆ ನಾಗರೀಕ ಸೌಲಭ್ಯಗಳ ಉದ್ದೇಶಕ್ಕಾಗಿ ಕಾಯ್ದಿರಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 799 ವೆಚ್ಚ-7/2010, ದಿನಾಂಕ: 08-11-2010ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೀತಾ ರಮೇಶ್
ಸರ್ಕಾರದ ಜಂಟಿ ಕಾರ್ಯದರ್ಶಿ
ಕಂದಾಯ ಇಲಾಖೆ
(ಭೂ.ಮಂ, ಭೂ ಕಂ ಮತ್ತು ಸೇವೆಗಳು)

ಪಿ.ಆರ್. 1285

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಶಾರದಾ ಶುಗರ್ಸ್ ಪ್ರೈ ಲಿಮಿಟೆಡ್, ರವರು ಬಿಜಾಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕು, ಕೊಡಗನೂರು ಗ್ರಾಮದಲ್ಲಿ ಸ್ಥಾಪಿಸಲಿರುವ 12 ಮೆ.ವ್ಯಾಟ್ ಸಹ ವಿದ್ಯುತ್ ಘಟಕವನ್ನೊಳಗೊಂಡ 2500 ಟಿಸಿಡಿ ಸಾಮರ್ಥ್ಯದ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಸರ್ಕಾರದ ತಾತ್ವಿಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸಿಐ 187 ಎಸ್‌ಜಿಎಫ್ 07 ದಿನಾಂಕ: 11-09-2007.
2. ಆಯುಕ್ತರು ಕಬ್ಬು ಅಭಿವೃದ್ಧಿರವರ ಪತ್ರ ಸಂಖ್ಯೆ ಡಿಎಸ್‌ಕೆ/ಡಿಇವಿ/51/2010-11 ದಿ: 03-02-2011.

ಪ್ರಸ್ತಾವನೆ:

ಮೇಲೆ ಓದಲಾದ (2)ರಲ್ಲಿರುವ ಆಯುಕ್ತರು ಕಬ್ಬು ಅಭಿವೃದ್ಧಿರವರ ಪತ್ರದಲ್ಲಿ ಶಾರದಾ ಶುಗರ್ಸ್ ಪ್ರೈ ಲಿಮಿಟೆಡ್, ರವರು ಬಿಜಾಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕು, ಕೊಡಗನೂರು ಗ್ರಾಮದಲ್ಲಿ 12 ಮೆ. ವ್ಯಾಟ್ ಸಹ ವಿದ್ಯುತ್ ಘಟಕವನ್ನೊಳಗೊಂಡ 2500 ಟಿಸಿಡಿ ಸಾಮರ್ಥ್ಯದ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಉದ್ದೇಶಿಸಿದ್ದಾರೆಂದು ತಿಳಿಸಿ ಈ ಕಾರ್ಖಾನೆ ಸ್ಥಾಪನೆಗೆ ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಲು ಹಾಗೂ ಕಬ್ಬಿನ ಮೀಸಲು ಕ್ಷೇತ್ರ ಹಂಚಿಕೆ ಮಾಡುವ ಬಗ್ಗೆ ಸರ್ಕಾರದ ಹಂತದಲ್ಲಿ ಕ್ರಮಕೈಗೊಳ್ಳಲು ಕೋರಿದ್ದಾರೆ.

ಆಯುಕ್ತರ ಪ್ರಸ್ತಾವನೆಯನ್ನು ಮೇಲೆ ಓದಲಾದ (1) ರಲ್ಲಿನ ಆದೇಶದಲ್ಲಿ ಅಳವಡಿಸಕೊಳ್ಳಲಾಗಿರುವ ನೀತಿಯನ್ವಯ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಐ 32 ಎಸ್‌ಜಿಎಫ್ 2011, ಬೆಂಗಳೂರು, ದಿನಾಂಕ: 30-03-2011

ಶಾರದಾ ಶುಗರ್ಸ್ ಪ್ರೈ ಲಿಮಿಟೆಡ್, ರವರು ಬಿಜಾಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕು, ಕೊಡಗನೂರು ಗ್ರಾಮದಲ್ಲಿ 12 ಮೆ.ವ್ಯಾಟ್ ಸಹ ವಿದ್ಯುತ್ ಘಟಕವನ್ನೊಳಗೊಂಡ 2500 ಟಿ.ಸಿ.ಡಿ. ಸಾಮರ್ಥ್ಯದ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ. ಕಾರ್ಖಾನೆಗೆ ಕಬ್ಬಿನ ಮೀಸಲು ಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಅಧಿಸೂಚನೆಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಮುಂದುವರೆದು ಸಹವಿದ್ಯುತ್ ಘಟಕ ಸ್ಥಾಪನೆಗೆ ಅನುಮತಿಯನ್ನು ಸಂಬಂಧಪಟ್ಟ ಇಲಾಖೆಯಿಂದ ನಿಯಮಾನುಸಾರ ಪಡೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ. ಆನಂದ್ ಕುಮಾರ್
ಪೀಠಾಧಿಕಾರಿ (ಸಕ್ಕರೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. 1286

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : "ಕನ್ನಡ ಚಲನಚಿತ್ರ ನೀತಿ – 2011" ರ ಬಗ್ಗೆ – ಆದೇಶ.

ಓದಲಾಗಿದೆ : 1. ನಿರ್ದೇಶಕರು, ವಾರ್ತಾ ಇಲಾಖೆ ಇವರ ದಿನಾಂಕ 04-11-2010 ರಂದು ಕೊನೆಗೊಂಡ ಪತ್ರ ಸಂಖ್ಯೆ : ವಾಇ/ಚಚಿವಿ/2010-11/16473.

ಪ್ರಸ್ತಾವನೆ :

ಕನ್ನಡ ಚಲನಚಿತ್ರ ರಂಗವು ಕರ್ನಾಟಕದಲ್ಲಿ ದೃಢವಾಗಿ ನೆಲೆಯೂರಬೇಕು ಎನ್ನುವ ಸದಾಶಯದಿಂದ ಹಾಗೂ ಕರ್ನಾಟಕದ ಪ್ರಾದೇಶಿಕ ಭಾಷಾ ಚಿತ್ರಗಳಿಗೆ ಸಂಬಂಧಿಸಿದಂತೆ ಇದುವರೆಗೆ ಚಾಲ್ತಿಯಲ್ಲಿದ್ದ ಮನರಂಜನಾ ತೆರಿಗೆ ವಿನಾಯಿತಿ, ಸಹಾಯಧನ, ಪ್ರಶಸ್ತಿ ಪುರಸ್ಕಾರ, ಚಲನಚಿತ್ರ ಚಿತ್ರೀಕರಣಕ್ಕೆ ಏಕಗವಾಕ್ಷಿ ಪದ್ಧತಿ ಮುಂತಾದ ಕಾರ್ಯಕ್ರಮಗಳನ್ನು ಪರಿಷ್ಕರಿಸಿ ಸಮಕಾಲೀನಗೊಳಿಸಿ ಕನ್ನಡ ಚಲನಚಿತ್ರ ರಂಗದ ಉನ್ನತಿಗೆ ಬೇಕಾದ ಹೊಸ ವಿಷಯಗಳನ್ನು ಸೇರಿಸಿ ನೂತನ ಕನ್ನಡ ಚಲನಚಿತ್ರ ನೀತಿಯನ್ನು ರೂಪಿಸುವ ಸಲುವಾಗಿ "ಕನ್ನಡ ಚಲನಚಿತ್ರ ನೀತಿ – 2011" ರ ಉದ್ದೇಶ, ವ್ಯಾಖ್ಯಾನಗಳು ಇತ್ಯಾದಿಗಳೊಂದಿಗೆ ರಚಿಸಿ ಪ್ರಕಟಿಸುವ ಸಲುವಾಗಿ ನಿರ್ದೇಶಕರು, ವಾರ್ತಾ ಇಲಾಖೆ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ನೂತನ "ಕನ್ನಡ ಚಲನಚಿತ್ರ ನೀತಿ – 2011" ನ್ನು ರೂಪಿಸುವ ಸಂದರ್ಭದಲ್ಲಿ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ, ಕನ್ನಡ ಚಲನಚಿತ್ರ ನಿರ್ದೇಶಕರ ಸಂಘ, ಕರ್ನಾಟಕ ಚಲನಚಿತ್ರ ಪ್ರದರ್ಶಕರ ಒಕ್ಕೂಟ ಹಾಗೂ ಇನ್ನಿತರ ಸಂಸ್ಥೆಗಳ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ, ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ ಹಾಗೂ ಮಾನ್ಯ ವಾರ್ತಾ ಸಚಿವರ ಅಧ್ಯಕ್ಷತೆಯಲ್ಲಿ ಅನುಕ್ರಮವಾಗಿ ದಿನಾಂಕ 15-10-2010 ಹಾಗೂ 17-09-2010 ರಂದು ನಡೆದ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿ ಈ ಚಲನಚಿತ್ರ ನೀತಿಯನ್ನು ರೂಪಿಸಲಾಗಿದೆ.

ಪ್ರಸ್ತುತ ಚಲನಚಿತ್ರ ನೀತಿಯಲ್ಲಿ ಚಲನಚಿತ್ರ ಚಿತ್ರೀಕರಣಕ್ಕೆ ಸಂಬಂಧಿಸಿದಂತೆ ಏಕಗವಾಕ್ಷಿ ಪದ್ಧತಿಯನ್ನು ರೂಪಿಸಲಾಗಿದ್ದು, ಈ ಏಕಗವಾಕ್ಷಿ ಪದ್ಧತಿಯನ್ನು ಅನುಷ್ಠಾನಗೊಳಿಸುವ ಕುರಿತಂತೆ ಈಗಾಗಲೇ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚಿಸಲಾಗಿದ್ದು, ಅದರನ್ವಯ "ಕನ್ನಡ ಚಲನಚಿತ್ರ ನೀತಿ – 2011" ನ್ನು ಪ್ರಕಟಿಸುವ ಬಗ್ಗೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 40 ಪಿಐಎಫ್ 2010, ಬೆಂಗಳೂರು, ದಿನಾಂಕ 19ನೇ ಮಾರ್ಚ್ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, "ಕನ್ನಡ ಚಲನಚಿತ್ರ ನೀತಿ – 2011" ನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿದ್ದಂತೆ ತಕ್ಷಣದಿಂದ ಜಾರಿಗೆ ತರಲು ಮಂಜೂರಾತಿ ನೀಡಿದೆ.

2011ರ ಕನ್ನಡ ಚಲನಚಿತ್ರ ನೀತಿಯು ಮುಂದಿನ 5 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಚಾಲ್ತಿಯಲ್ಲಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಎಫ್‌ಡಿ 191/ವೆಚ್ಚ–7/ 2011 ದಿನಾಂಕ : 15–02–2011 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಸುಧಾಕರ ಶೆಟ್ಟಿ,
ಸರ್ಕಾರದ ಉಪ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.

ಅನುಬಂಧ

ಕನ್ನಡ ಚಲನಚಿತ್ರ ನೀತಿ – 2011

ಪ್ರಸ್ತಾವನೆ :

ಕನ್ನಡ ಚಲನಚಿತ್ರ ರಂಗವು ಕರ್ನಾಟಕದಲ್ಲಿ ಸದೃಢವಾಗಿ ನೆಲೆಯೂರಬೇಕೆನ್ನುವ ಸದಾಶಯದಿಂದ ರಾಜ್ಯ ಸರ್ಕಾರವು ರಚನಾತ್ಮಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತ ಬಂದಿದೆ. ಕನ್ನಡ ಮತ್ತು ಕರ್ನಾಟಕದ ಪ್ರಾದೇಶಿಕ ಭಾಷಾ ಚಿತ್ರಗಳಿಗೆ ಸಂಬಂಧಿಸಿದಂತೆ ಈವರೆಗೆ ಚಾಲ್ತಿಯಲ್ಲಿದ್ದ ಮನರಂಜನಾ ತೆರಿಗೆ ವಿನಾಯಿತಿ, ಸಹಾಯಧನ, ಪ್ರಶಸ್ತಿ ಪುರಸ್ಕಾರ–ಮುಂತಾದ ಮುಖ್ಯ ಯೋಜನಾಕ್ರಮಗಳನ್ನು ಪರಿಷ್ಕರಿಸಿ, ಸಮಕಾಲೀನಗೊಳಿಸಿ, ನಮ್ಮ ಚಿತ್ರರಂಗದ ಉನ್ನತಿಗೆ ಬೇಕಾದ ಹೊಸ ವಿಷಯಗಳನ್ನು ಸೇರಿಸಿ "ಕನ್ನಡ ಚಲನಚಿತ್ರ ನೀತಿ – 2011" ನ್ನು ರೂಪಿಸಲಾಗಿದೆ. ಚಿತ್ರೋದ್ಯಮದ ವಿಕಾಸವು ಸದಭಿರುಚಿ, ಸ್ಥಳೀಯತೆ ಮತ್ತು ಸೃಜನಶೀಲತೆಗಳನ್ನು ಅವಲಂಬಿಸಿದೆಯೆಂಬ ತಾತ್ವಿಕ ತಿಳಿವಳಿಕೆಯು ಈ ಚಲನಚಿತ್ರ ನೀತಿಯ ತಳಹದಿಯಾಗಿದೆ.

ಹೆಸರು ಮತ್ತು ಆರಂಭ :

(1) ಕರ್ನಾಟಕ ರಾಜ್ಯ ಸರ್ಕಾರವು ರೂಪಿಸಿರುವ ಚಲನಚಿತ್ರ ನಿಯಮಾವಳಿಗಳನ್ನು "ಕನ್ನಡ ಚಲನಚಿತ್ರ ನೀತಿ – 2011" ಎಂದು ಹೆಸರಿಸಿದೆ. ಸದರಿ ನೀತಿ ಮತ್ತು ನಿಯಮಾವಳಿಗಳು ಅಂಗೀಕರಿಸಿದ ದಿನದಿಂದ ಜಾರಿಗೊಳ್ಳುತ್ತವೆ.

ಉದ್ದೇಶ :

ಕನ್ನಡ ಚಲನಚಿತ್ರ ನೀತಿ – 2011 ಈ ಕೆಳಕಂಡ ಪ್ರಮುಖ ಉದ್ದೇಶಗಳನ್ನು ಹೊಂದಿರುತ್ತದೆ.

i. ಕನ್ನಡ ಚಿತ್ರೋದ್ಯಮದ ಬೆಳವಣಿಗೆಗೆ ಪೂರಕವಾದ ಮೂಲಸೌಲಭ್ಯ ಮತ್ತು ಉತ್ತೇಜನ ನೀಡುವುದು.
ii. ನಾಡಿನ ವಿವಿಧ ಪ್ರಾಂತ್ಯಗಳ ಕಲೆ, ನುಡಿ, ಸಂಸ್ಕೃತಿ, ನೈಸರ್ಗಿಕ, ಐತಿಹಾಸಿಕ ಮತ್ತು ಪ್ರವಾಸಿ ತಾಣಗಳ ಪರಿಚಯಕ್ಕೆ ನೆರವಾಗುವುದು.
iii. ಕನ್ನಡದ ಕಥೆ, ಕಾದಂಬರಿ ಆಧಾರಿತ ಚಿತ್ರಗಳಿಗೆ ಪ್ರೋತ್ಸಾಹ ನೀಡುವುದು.
iv. ಚಲನಚಿತ್ರ ಕಲಾವಿದರಿಗೆ ಮತ್ತು ತಂತ್ರಜ್ಞರಿಗೆ ಉತ್ತೇಜನ ಪ್ರಶಸ್ತಿ ನೀಡುವುದು.
v. ಕನ್ನಡ ಚಲನಚಿತ್ರ ಸಾಹಿತ್ಯ ರಚನೆಗೆ ಪ್ರೋತ್ಸಾಹಕ ಪ್ರಶಸ್ತಿ ನೀಡುವುದು.
vi. ಚಲನಚಿತ್ರೀಕರಣಗಳಿಗೆ ನೆರವಾಗಲು ಏಕಗವಾಕ್ಷಿ ಯೋಜನೆಯನ್ನು ಹಂತ ಹಂತವಾಗಿ ಜಾರಿಗೊಳಿಸುವುದು.
vii. ಕನ್ನಡ ಚಲನಚಿತ್ರಗಳ ಪ್ರದರ್ಶನಕ್ಕೆ ನೆರವಾಗಲು ಮಿನಿ ಚಿತ್ರಮಂದಿರಗಳ ನಿರ್ಮಾಣಕ್ಕೆ ಒತ್ತಾಸೆ ನೀಡುವುದು.
viii. ಚಲನಚಿತ್ರ ಶೈಕ್ಷಣಿಕ ಮತ್ತು ತರಬೇತಿ ನೆಲೆಯನ್ನು ಸದೃಢಪಡಿಸುವುದು.
ix. ಚಲನಚಿತ್ರೋತ್ಸವಗಳ ಸಂಘಟನೆಗೆ ಸಹಯೋಗ ನೀಡುವುದು.

ವ್ಯಾಪ್ತಿ :

(3) ಕನ್ನಡ ಹಾಗೂ ಕರ್ನಾಟಕದ ಪ್ರಾದೇಶಿಕ ಭಾಷಾ ಚಲನಚಿತ್ರಗಳಿಗೆ ಮನರಂಜನಾ ತೆರಿಗೆ ವಿನಾಯಿತಿ, ಸಹಾಯಧನ (ಸಬ್ಸಿಡಿ) ಮತ್ತು ವಾರ್ಷಿಕ ಪ್ರಶಸ್ತಿಗಳನ್ನು ನೀಡುವ ಸಂದರ್ಭದಲ್ಲಿ ಅನುಸರಿಸಬೇಕಾದ ನೀತಿ–ನಿಯಮ ಮತ್ತು ಮಾರ್ಗಸೂಚಿಗಳನ್ನು ಮತ್ತು ರಾಜ್ಯದಲ್ಲಿ ಕನ್ನಡ ಚಿತ್ರೋದ್ಯಮದ ಬೆಳವಣಿಗೆಗೆ ಅಗತ್ಯವಾದ ನಿಲುವುಗಳ ನಿರೂಪಣೆಯನ್ನು ಒಳಗೊಂಡಿರುತ್ತದೆ.

ವ್ಯಾಖ್ಯೆಗಳು :

(4) ಚಲನಚಿತ್ರ ನೀತಿಯಲ್ಲಿ ಪ್ರಸ್ತಾಪವಾಗಿರುವ ಆಯ್ದ ಪದ ಮತ್ತು ಪದಗುಚ್ಛಗಳಿಗೆ ಸ್ಪಷ್ಟ ವ್ಯಾಖ್ಯಾನ ಕೆಳಕಂಡಂತಿರುತ್ತದೆ.

i. **"ರಾಜ್ಯ"** ಎಂದರೆ ಕರ್ನಾಟಕ ರಾಜ್ಯ.
ii. **"ಸರ್ಕಾರ"** ಅಂದರೆ ಕರ್ನಾಟಕ ರಾಜ್ಯ ಸರ್ಕಾರ.
iii. **"ಇಲಾಖೆ"** ಎಂದರೆ, ವಾರ್ತಾ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
iv. **"ಕನ್ನಡ ಹಾಗೂ ಪ್ರಾದೇಶಿಕ ಭಾಷೆ"** ಎಂದರೆ ಕನ್ನಡ ಹಾಗೂ ಕರ್ನಾಟಕದ ಇತರೆ ಪ್ರಾದೇಶಿಕ ಭಾಷೆಗಳಾದ ತುಳು, ಕೊಡವ, ಕೊಂಕಣಿ, ಬಂಜಾರ, ಬ್ಯಾರಿ ಭಾಷೆಗಳು.
v. **"ಪ್ರಶಸ್ತಿ ಆಯ್ಕೆ ಸಮಿತಿ"** ಎಂದರೆ ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ರಚಿಸುವ ಕರ್ನಾಟಕ ರಾಜ್ಯ ಚಲನಚಿತ್ರಗಳ ವಾರ್ಷಿಕ ಪ್ರಶಸ್ತಿ ಆಯ್ಕೆ ಸಮಿತಿ.
vi. **"ಗುಣಾತ್ಮಕ ಚಲನ ಚಿತ್ರಗಳ ಆಯ್ಕೆ ಸಮಿತಿ"** ಎಂದರೆ ಕರ್ನಾಟಕ ಸರ್ಕಾರವು ಕನ್ನಡ ಹಾಗೂ ಪ್ರಾದೇಶಿಕ ಭಾಷೆಯ ಚಲನಚಿತ್ರಗಳಿಗೆ ಸಹಾಯಧನ ನೀಡಲು ಕಾಲಕಾಲಕ್ಕೆ ರಚಿಸುವ ಗುಣಾತ್ಮಕ ಕನ್ನಡ ಹಾಗೂ ಪ್ರಾದೇಶಿಕ ಭಾಷೆಗಳ ಚಲನಚಿತ್ರಗಳ ಆಯ್ಕೆ ಸಮಿತಿ.
vii. **"ಚಲನಚಿತ್ರ"** ಎಂದರೆ 2,500 ಮೀಟರ್‌ಗಳಿಗಿಂತ ಕಡಿಮೆ ಇಲ್ಲದಿರುವ 35 ಎಂ.ಎಂ. ಹಾಗೂ ಅದಕ್ಕಿಂತ ಹೆಚ್ಚಿನ ಅಳತೆಯಲ್ಲಿ ನಿರ್ಮಾಣವಾಗಿರುವ ಅಂತಿಮವಾಗಿ ಸೆಲ್ಯುಲಾಯಿಡ್ ರೂಪದಲ್ಲಿರುವ ಕಥಾನಕ ಚಲನಚಿತ್ರ.
viii. **"ಪುನರಾವೃತ"** (ರಿಮೇಕ್) ಚಿತ್ರಗಳು ಎಂದರೆ ಇತರೆ ಭಾಷೆಗಳಲ್ಲಿ ಈಗಾಗಲೇ ನಿರ್ಮಾಣಗೊಂಡಿರುವ ಚಿತ್ರದ ನಿರೂಪಣಾ ಶೈಲಿ, ದೃಶ್ಯಗಳ ಪುನರಾವರ್ತನೆಯಲ್ಲಿ ಶೇಕಡಾ 60ಕ್ಕಿಂತ ಹೆಚ್ಚು ಹೋಲಿಕೆ ಇರುವಂತೆ ನಿರ್ಮಿಸಿರುವ ಕನ್ನಡ ಹಾಗೂ ಪ್ರಾದೇಶಿಕ ಭಾಷಾ ಚಿತ್ರಗಳು.

ಮನರಂಜನಾ ತೆರಿಗೆ ವಿನಾಯಿತಿ

(5) ಕರ್ನಾಟಕ ರಾಜ್ಯದಲ್ಲೇ ಸಂಪೂರ್ಣವಾಗಿ ನಿರ್ಮಾಣವಾಗುವ ಕನ್ನಡ ಹಾಗೂ ಪ್ರಾದೇಶಿಕ ಭಾಷಾ ಚಲನಚಿತ್ರಗಳು ನಿರ್ದಿಷ್ಟಪಡಿಸಿದ ಕೆಲವು ರಿಯಾಯಿತಿಗೆ ಒಳಪಟ್ಟು ಸಂಪೂರ್ಣ ಮನರಂಜನಾ ತೆರಿಗೆ ವಿನಾಯಿತಿಗೆ (ಶೇಕಡ 100 ರಷ್ಟು) ಅರ್ಹತೆ ಹೊಂದಿರುತ್ತದೆ.

(6) ವಾರ್ತಾ ಇಲಾಖೆಯ ಪೂರ್ವಾನುಮತಿ ಪಡೆದು ಹೊರ ರಾಜ್ಯಗಳಲ್ಲಿನ ಹೊರಾಂಗಣಲ್ಲಿ ಮತ್ತು ವಿಶೇಷ ಸಂದರ್ಭಗಳಲ್ಲಿ ಮಾತ್ರ ಒಳಾಂಗಣದಲ್ಲಿ (ಚಿತ್ರನಗರಿ ಹೊರತುಪಡಿಸಿ) ಚಲನಚಿತ್ರದ ಒಟ್ಟು ಉದ್ದದಲ್ಲಿ ಶೇಕಡ 50% ಕ್ಕಿಂತ ಕಡಿಮೆ ಭಾಗವನ್ನು ಚಿತ್ರೀಕರಿಸಿರುವ ಕನ್ನಡ ಹಾಗೂ ಪ್ರಾದೇಶಿಕ ಭಾಷಾ ಚಲನಚಿತ್ರಗಳು ಸಂಪೂರ್ಣ ಮನರಂಜನಾ ತೆರಿಗೆ ವಿನಾಯಿತಿಗೆ ಅರ್ಹತೆ ಪಡೆಯುತ್ತವೆ. ಈ ಮೇಲಿನ ನಿಬಂಧನೆಗೊಳಪಟ್ಟ ಪುನರಾವೃತ ಚಿತ್ರಗಳು (ರೀಮೇಕ್) ಕೂಡ ಮನರಂಜನಾ ತೆರಿಗೆ ವಿನಾಯಿತಿಗೆ ಮಾತ್ರ ಅರ್ಹವಾಗಿರುತ್ತವೆ.

ತೆರಿಗೆ ವಿನಾಯಿತಿಗೆ ಅರ್ಹತೆಗಳು :

(7) ಕನ್ನಡ ಚಿತ್ರೋದ್ಯಮವು ಕನ್ನಡ ನಾಡಿನಲ್ಲಿಯೇ ನೆಲೆಯೂರಲು ಅನುಕೂಲವಾಗುವಮತೆ ಚಲನಚಿತ್ರ ನಿರ್ಮಾಣದ ಮೇಲೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ತೆರಿಗೆ ವಿನಾಯಿತಿಗೆ ಅರ್ಹತೆ ನಿಗದಿಪಡಿಸಲಾಗಿದೆ.

i. ಚಲನಚಿತ್ರದ ಚಿತ್ರೀಕರಣ, ಸಂಸ್ಕರಣ, ಸಂಕಲನ, ಧ್ವನಿ ಮುದ್ರಣ ಇತ್ಯಾದಿ ನಿರ್ಮಾಣ ಕಾರ್ಯಗಳೆಲ್ಲವು ರಾಜ್ಯದಲ್ಲಿಯೇ ನಡೆದಿರಬೇಕು.
ii. ಚಲನಚಿತ್ರದ ಒಟ್ಟು ಉದ್ದದಲ್ಲಿ ಶೇಕಡ 50 ಕ್ಕಿಂತ ಹೆಚ್ಚು ಭಾಗವು ರಾಜ್ಯದಲ್ಲಿಯೇ ಚಿತ್ರೀಕರಣವಾಗಿರಬೇಕು.
iii. ಹೊರಗಿನ ರಾಜ್ಯಗಳ ಹೊರಾಂಗಣದಲ್ಲಿ ಮತ್ತು ವಿಶೇಷ ಸಂದರ್ಭಗಳಲ್ಲಿ ಮಾತ್ರ ಒಳಾಂಗಣದಲ್ಲಿ ಚಿತ್ರೀಕರಿಸುವಾಗ (ಚಿತ್ರನಗರಿ ಹೊರತುಪಡಿಸಿ) ಕಡ್ಡಾಯವಾಗಿ ವಾರ್ತಾ ಇಲಾಖೆಯ ಪೂರ್ವಾನುಮತಿಯನ್ನು ಪಡೆದು ಚಿತ್ರೀಕರಿಸಿರಬೇಕು.

ತೆರಿಗೆ ವಿನಾಯಿತಿಗೆ ಅನರ್ಹತೆಗಳು :

(8) ಕನ್ನಡ ಚಿತ್ರೋದ್ಯಮದ ಒಳಿತಿಗಾಗಿ ರೂಪಿಸಿರುವ ನಿಯಮಾವಳಿಯಂತೆ ಈ ಕೆಳಕಂಡ ಮಾದರಿಯ ಚಲನಚಿತ್ರಗಳು ಮನರಂಜನೆ ತೆರಿಗೆ ವಿನಾಯಿತಿಗೆ ಅನರ್ಹವಾಗಿರುತ್ತವೆ.

i. ಇತರೆ ಭಾಷೆಗಳಿಂದ ಕನ್ನಡ ಭಾಷೆಗೆ ಡಬ್ ಆಗಿರುವ ಚಲನಚಿತ್ರಗಳು.
ii. ಹೊರ ರಾಜ್ಯಗಳಲ್ಲಿ ಒಳಾಂಗಣದಲ್ಲಿ ವಾರ್ತಾ ಇಲಾಖೆಯ ಪೂರ್ವಾನುಮತಿ ಪಡೆಯದೆ ಚಿತ್ರೀಕರಣವಾಗಿರುವ ಚಿತ್ರಗಳು.
iii. ಚಲನಚಿತ್ರದ ಶೇಕಡ 50 ಕ್ಕಿಂತ ಹೆಚ್ಚು ಭಾಗ ಹೊರ ರಾಜ್ಯಗಳಲ್ಲಿ/ದೇಶಗಳಲ್ಲಿ ಚಿತ್ರೀಕರಣವಾಗಿರುವ ಚಿತ್ರಗಳು.

ಕನ್ನಡ ಚಲನಚಿತ್ರಗಳಿಗೆ ಸಹಾಯಧನ

(9) ಗುಣಾತ್ಮಕ ಕನ್ನಡ ಹಾಗೂ ಪ್ರಾದೇಶಿಕ ಭಾಷಾ ಚಲನಚಿತ್ರಗಳಿಗೆ ಪ್ರೋತ್ಸಾಹಿಸಲು ಸಹಾಯಧನ ನೀಡುವ ಪದ್ಧತಿಯನ್ನು ಜಾರಿಗೊಳಿಸಲಾಗಿದೆ.

i. ಕರ್ನಾಟಕ ರಾಜ್ಯದಲ್ಲಿಯೇ ಸಂಪೂರ್ಣವಾಗಿ ನಿರ್ಮಾಣವಾಗುವ ಕನ್ನಡ ಹಾಗೂ ಕರ್ನಾಟಕದ ಪ್ರಾದೇಶಿಕ ಭಾಷೆಗಳ ಐವತ್ತು ಗುಣಾತ್ಮಕ ಚಲನಚಿತ್ರಗಳವರೆಗೆ ಪ್ರತೀ ವರ್ಷ, ನಿಗದಿಪಡಿಸಿದ ಸಹಾಯಧನಕ್ಕೆ ಅರ್ಹವಾಗಿರುತ್ತವೆ.
ii. ಆಯಾ ವರ್ಷದ ಜನವರಿ 1 ರಿಂದ ಡಿಸೆಂಬರ್ 31ರ ವರೆಗಿನ ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ ಸೆನ್ಸಾರ್ ಆಗಿರುವ ಕನ್ನಡ ಚಲನಚಿತ್ರಗಳು ಆಯಾ ವರ್ಷದ ಸಹಾಯಧನ ಮಂಜೂರಾತಿಗೆ ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುತ್ತವೆ.
iii. ಸಹಾಯಧನ ಅರ್ಜಿ ಸಲ್ಲಿಕೆಗೆ ಆಯಾ ಆರ್ಥಿಕ ವರ್ಷದ ಮಾರ್ಚ್ 31 ಅಂತಿಮ ದಿನಾಂಕವಾಗಿರುತ್ತದೆ.
iv. ಪ್ರತೀವರ್ಷ ಜನವರಿ ತಿಂಗಳಿನಲ್ಲಿ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗುತ್ತದೆ. ನಿರ್ಮಾಪಕರು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು.

ಸಹಾಯಧನ ವರ್ಗೀಕರಣ :

(10) ಪ್ರಶಸ್ತಿ ವಿಜೇತ ಚಲನಚಿತ್ರಗಳಿಗೆ ಮತ್ತು ಸಾಹಿತ್ಯ ಕೃತಿ ಆಧಾರಿತ ಹಾಗೂ ಚಾರಿತ್ರಿಕ ಮತ್ತು ಪ್ರವಾಸಿತಾಣ ಆಧಾರಿತ ಹಾಗೂ ಮಕ್ಕಳ ಚಿತ್ರಗಳಿಗೆ ವಿಶೇಷ ಪ್ರೋತ್ಸಾಹ ನೀಡಲು ಸಹಾಯಧನವನ್ನು ವರ್ಗೀಕರಣ ಪ್ರಕ್ರಿಯೆಗೆ ಒಳಪಡಿಸಲಾಗಿದೆ.

i. ಗುಣಾತ್ಮಕ ಚಲನಚಿತ್ರಗಳ ಆಯ್ಕೆ ಸಮಿತಿಯು ಶಿಫಾರಸ್ಸು ಮಾಡುವ 50 ಉತ್ತಮ ಕನ್ನಡ ಚಲನಚಿತ್ರಗಳು ಸಹಾಯಧನಕ್ಕೆ ಅರ್ಹತೆ ಹೊಂದಿರುತ್ತದೆ. ಈ ಐವತ್ತು ಚಿತ್ರಗಳ ಪರಿಮಿತಿಗೆ ಒಳಪಟ್ಟಂತೆ ಮುಂದಿನ ಕ್ರಮಸಂಖ್ಯೆ iv ಮತ್ತು v ರಲ್ಲಿ ನಮೂದಿಸಿರುವ ವಿಶೇಷ ಮನ್ನಣೆಯ ಚಿತ್ರಗಳು ತಲಾ 15 ಲಕ್ಷ ರೂ.ಗಳ ವಿಶೇಷ ಸಹಾಯಧನಕ್ಕೆ ಅರ್ಹತೆ ಹೊಂದಿರುತ್ತವೆ. ಉಳಿದ ಚಿತ್ರಗಳು ತಲಾ 10 ಲಕ್ಷ ರೂ.ಗಳ ಸಹಾಯಧನಕ್ಕೆ ಅರ್ಹತೆ ಪಡೆಯುತ್ತವೆ.
ii. ಸ್ವಾತಂತ್ರ್ಯಪೂರ್ವ ಭಾರತದ ಕಥಾವಸ್ತುವನ್ನು ಪ್ರಧಾನವಾಗಿ ಅಳವಡಿಸಿಕೊಂಡು ನಿರ್ಮಿಸಿರುವ ಚಾರಿತ್ರಿಕ ಮತ್ತು ರಾಜ್ಯದ ಪ್ರವಾಸಿತಾಣಗಳನ್ನು ಕೇಂದ್ರೀಕರಿಸಿ ನಿರ್ಮಿಸಿರುವ ಗರಿಷ್ಠ ನಾಲ್ಕು ಚಲನಚಿತ್ರಗಳು ತಲಾ 25 ಲಕ್ಷ ರೂ.ಗಳ ವಿಶೇಷ ಪ್ರೋತ್ಸಾಹ ಸಹಾಯಧನಕ್ಕೆ ಅರ್ಹತೆ ಹೊಂದಿರುತ್ತವೆ.
iii. ರಾಜ್ಯ ಸರ್ಕಾರದ ಅತ್ಯುತ್ತಮ ಮಕ್ಕಳ ಪ್ರಶಸ್ತಿ ಪಡೆದ ಚಲನಚಿತ್ರವನ್ನು ಒಳಗೊಂಡಂತೆ ಗರಿಷ್ಠ ಎರಡು ಮಕ್ಕಳ ಚಲನಚಿತ್ರಗಳು ತಲಾ 25 ಲಕ್ಷ ರೂ.ಗಳ ವಿಶೇಷ ಪ್ರೋತ್ಸಾಹ ಸಹಾಯಧನಕ್ಕೆ ಅರ್ಹತೆ ಹೊಂದಿರುತ್ತವೆ.
iv. ರಾಷ್ಟ್ರಮಟ್ಟದಲ್ಲಿ ಸ್ವರ್ಣ ಮತ್ತು ರಜತ ಕಮಲ ಪ್ರಶಸ್ತಿ ಪಡೆದ ಚಲನಚಿತ್ರಗಳು; ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರಶಸ್ತಿ ಪಡೆದ ಚಲನಚಿತ್ರಗಳು; ಭಾರತೀಯ ಪನೋರಮ ಮತ್ತು ಯಾವುದೇ ಅಧಿಕೃತ (FIAPF ನಿಂದ ಮನ್ನಣೆ ಪಡೆದ) ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿ ಪ್ರದರ್ಶನಗೊಂಡ ಚಿತ್ರಗಳು; ರಾಜ್ಯ ಸರ್ಕಾರದ ಪ್ರಥಮ, ದ್ವಿತೀಯ ಮತ್ತು ತೃತೀಯ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ, ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ ಹಾಗೂ ವಿಶೇಷ ಸಾಮಾಜಿಕ ಕಾಳಜಿಯ ಚಲನಚಿತ್ರಗಳು ಹಾಗೂ ನಿರ್ದೇಶಕರ ಪ್ರಥಮ ನಿರ್ದೇಶನದ ಅತ್ಯುತ್ತಮ ಚಲನಚಿತ್ರಗಳು ತಲಾ 15 ಲಕ್ಷ ರೂ.ಗಳ ವಿಶೇಷ ಸಹಾಯಧನಕ್ಕೆ ಅರ್ಹತೆ ಹೊಂದಿರುತ್ತವೆ. (ಈ ಚಿತ್ರಗಳು ಗುಣಾತ್ಮಕ ಚಲನಚಿತ್ರಗಳ ಆಯ್ಕೆ ಸಮಿತಿಯ ವೀಕ್ಷಣೆಗೆ ಒಳಪಡದೆ ನೇರವಾಗಿ ಸಹಾಯಧನ ಪಡೆಯಲು ಅರ್ಹತೆ ಹೊಂದಿರುತ್ತವೆ).
v. ಉತ್ತಮ ಸಾಹಿತ್ಯ ಕೃತಿಗಳನ್ನು ಸಂಪೂರ್ಣವಾಗಿ ಆಧರಿಸಿ ನಿರ್ಮಿಸಿದ ಗರಿಷ್ಠ ಐದು ಗುಣಾತ್ಮಕ ಚಲನಚಿತ್ರಗಳು ತಲಾ 15 ಲಕ್ಷ ರೂ.ಗಳ ವಿಶೇಷ ಸಹಾಯಧನಕ್ಕೆ ಅರ್ಹತೆ ಹೊಂದಿರುತ್ತವೆ.

ಗುಣಾತ್ಮಕ ಕನ್ನಡ ಚಲನಚಿತ್ರಗಳ ಆಯ್ಕೆ ಸಮಿತಿ :

(11) ಸಹಾಯಧನಕ್ಕಾಗಿ ಗುಣಾತ್ಮಕ ಕನ್ನಡ ಚಲನಚಿತ್ರಗಳನ್ನು ಆಯ್ಕೆ ಮಾಡಲು ಚಲನಚಿತ್ರ ರಂಗದ ಪರಿಣಿತರನ್ನು ಮತ್ತು ಅಧಿಕಾರಿಗಳನ್ನು ಒಳಗೊಂಡ ಒಟ್ಟು 11 ಮಂದಿ ಸದಸ್ಯರನ್ನುಳ್ಳ ಗುಣಾತ್ಮಕ ಕನ್ನಡ ಚಲನಚಿತ್ರಗಳ ಆಯ್ಕೆ ಸಮಿತಿಯನ್ನು ಪ್ರತೀ ವರ್ಷ ರಚಿಸಲಾಗುವುದು.

i. ಸರ್ಕಾರದಿಂದ ರಚಿತವಾಗುವ ಗುಣಾತ್ಮಕ ಕನ್ನಡ ಚಲನಚಿತ್ರಗಳ ಆಯ್ಕೆ ಸಮಿತಿಯು ಚಲನಚಿತ್ರಗಳನ್ನು ವೀಕ್ಷಿಸಿ, ಅವುಗಳಲ್ಲಿ ಗುಣಾತ್ಮಕ, ಐತಿಹಾಸಿಕ ಹಾಗೂ ಮಕ್ಕಳ ಚಲನಚಿತ್ರಗಳನ್ನು ಸಹಾಯಧನಕ್ಕಾಗಿ ಆಯ್ಕೆ ಮಾಡುತ್ತದೆ.

ii. ಸ್ಪರ್ಧೆಯಲ್ಲಿರುವ ಚಲನಚಿತ್ರಗಳೊಂದಿಗೆ ನೇರ ಅಥವಾ ಪರೋಕ್ಷ ಸಂಬಂಧವಿರುವವರು ಸಮಿತಿಯ ಸದಸ್ಯರಾಗಿ ಇರುವಂತಿಲ್ಲ. ಇಂತಹ ಸಂದರ್ಭಗಳಲ್ಲಿ ಅವರನ್ನು ಕೈಬಿಟ್ಟು ಅವರ ಬದಲಿಗೆ ಬೇರೊಬ್ಬರನ್ನು ಸದಸ್ಯರನ್ನಾಗಿ ನೇಮಿಸಿಕೊಳ್ಳುವ ಅಧಿಕಾರ ಗುಣಾತ್ಮಕ ಚಲನಚಿತ್ರಗಳ ಆಯ್ಕೆ ಸಮಿತಿಗಿರುತ್ತದೆ.

iii. ಆಯ್ಕೆ ಸಂದರ್ಭದಲ್ಲಿ ಸಮಮತಗಳು ಬಿದ್ದಾಗ ಎರಡನೆ ನಿರ್ಣಾಯಕ ಮತ ಚಲಾಯಿಸಲು ಅಧ್ಯಕ್ಷರಿಗೆ ಅಧಿಕಾರವಿರುತ್ತದೆ.

iv. ಸ್ಪರ್ಧೆಯಲ್ಲಿರುವ ಯಾವುದೇ ಚಿತ್ರವು ರೀಮೇಕ್, ಡಬ್ಬಿಂಗ್ ಎಂಬ ಅನುಮಾನವಿದ್ದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಆಯ್ಕೆ ಸಮಿತಿಗಿರುತ್ತದೆ.

v. ಗುಣಾತ್ಮಕ ಆಯ್ಕೆ ಸಮಿತಿಯು ಒಟ್ಟಾರೆ 11 (ಹನ್ನೊಂದು) ಸದಸ್ಯರನ್ನು ಒಳಗೊಂಡಿರತಕ್ಕದ್ದು.

ಅಧ್ಯಕ್ಷರು :

(12) ಚಲನಚಿತ್ರ ಸಂಗೀತ ಕಲೆ, ಸಾಹಿತ್ಯ ಕ್ಷೇತ್ರಗಳಲ್ಲಿ ಪರಿಣಿತಿಯುಳ್ಳ ಚಲನಚಿತ್ರ ರಂಗದಲ್ಲಿ ಸಕ್ರಿಯವಾಗಿದ್ದು ಹಾಗೂ ಚಲನಚಿತ್ರಗಳ ಬಗ್ಗೆ ಅಭಿರುಚಿಯನ್ನು ಹೊಂದಿರುವ, ಸರ್ಕಾರೇತರ ವ್ಯಕ್ತಿಯನ್ನು ಆಯ್ಕೆ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸುವುದು.

ಸದಸ್ಯರು :

(13) ಚಲನಚಿತ್ರ, ಸಂಗೀತ, ಕಲೆ, ಸಾಹಿತ್ಯ, ಚಲನಚಿತ್ರ ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ ಪರಿಣತಿಯುಳ್ಳ ಹಾಗೂ ಚಲನಚಿತ್ರಗಳ ಬಗ್ಗೆ ಅಭಿರುಚಿ ಹೊಂದಿರುವ ಒಂಭತ್ತು ಮಂದಿಯನ್ನು ಆಯ್ಕೆ ಸಮಿತಿಯ ಸದಸ್ಯರುಗಳನ್ನಾಗಿ ನೇಮಿಸುವುದು.

ಸದಸ್ಯ ಕಾರ್ಯದರ್ಶಿ :

(14) ರಾಜ್ಯ ಸರ್ಕಾರದ ವಾರ್ತಾ ಇಲಾಖೆಯ ನಿರ್ದೇಶಕರು ಅಥವಾ ಅವರಿಂದ ನಾಮನಿರ್ದೇಶಿಸಲ್ಪಟ್ಟ ಜಂಟಿ ನಿರ್ದೇಶಕರು ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

(15) ಗುಣಾತ್ಮಕ ಕನ್ನಡ ಚಲನಚಿತ್ರಗಳ ಆಯ್ಕೆ ಸಮಿತಿಯನ್ನು ಎರಡು ತಂಡಗಳನ್ನಾಗಿ (Panal) ರಚಿಸಿಕೊಂಡು ಚಲನಚಿತ್ರಗಳನ್ನು ವೀಕ್ಷಿಸಲು ಅವಕಾಶವಿರುತ್ತದೆ. ಅದಾಗ್ಯೂ ಆಯ್ಕೆ ಸಮಿತಿಯು ಅಂತಿಮವಾಗಿ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಲು ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಯೂ ಸೇರಿದಂತೆ ಕನಿಷ್ಟ 9 ಮಂದಿ ಸದಸ್ಯರ ಕೋರಂ ಹೊಂದಿರಬೇಕು.

ಮಾರ್ಗಸೂಚಿಗಳು :

(16) ಭಾರತ ಸರ್ಕಾರದ ಪ್ರಾದೇಶಿಕ ಚಲನಚಿತ್ರ ಸೆನ್ಸಾರ್ ಮಂಡಳಿಯ ಸಾಮಾನ್ಯ ನಿಯಮಾವಳಿಗಳನ್ನು ಹಿನ್ನೆಲೆಯನ್ನಾಗಿಟ್ಟುಕೊಂಡು ಆಯ್ಕೆ ಸಮಿತಿಯು ತನ್ನ ವಿವೇಚನೆಗೆ ಅನುಗುಣವಾಗಿ ನಿರ್ಧಾರ ತೆಗೆದುಕೊಳ್ಳಬಹುದಾಗಿದೆ. ಆದಾಗ್ಯೂ ಈ ಕೆಳಗಿನ ಮಾರ್ಗಸೂಚಿಗಳನ್ನು ಆಯ್ಕೆ ಸಮಿತಿಯು ಅನುಸರಿಸಬೇಕಾಗಿರುತ್ತದೆ.

i. ಚಲನಚಿತ್ರದಲ್ಲಿ ರಾಷ್ಟ್ರೀಯ ಸಮಗ್ರತೆಗೆ ಧಕ್ಕೆ ತರುವಂತಹ ಮತೀಯ ಗಲಭೆಗಳಿಗೆ ಪ್ರಚೋದನೆ ನೀಡುವಂತಹ ಕಥೆ, ದೃಶ್ಯ ಅಥವಾ ಸಂಭಾಷಣೆಗಳಿರಬಾರದು.

ii. ಚಲನಚಿತ್ರವು ಮಹಿಳೆಯರ ಮೇಲಿನ ಹಿಂಸೆ, ಅತ್ಯಾಚಾರ, ಲೈಂಗಿಕತೆ, ಕೀಳುಮಟ್ಟದ ಕಾಮಪ್ರಚೋದನೆಯಂತಹ ಕಥೆ, ಕ್ರೌರ್ಯ ದೃಶ್ಯಗಳನ್ನು ಅನಾವಶ್ಯಕವಾಗಿ ಒಳಗೊಂಡಿರಬಾರದು.

iii. ಕೀಳು ಅಭಿರುಚಿಯ ದ್ವಂದ್ವಾರ್ಥ ಸಂಭಾಷಣೆಗಳು ಚಲನಚಿತ್ರದಲ್ಲಿರಬಾರದು.

iv. ಚಲನಚಿತ್ರದಲ್ಲಿ ಅನಾವಶ್ಯಕ ಹೊಡೆದಾಟ, ಕ್ರೌರ್ಯ, ಹಿಂಸೆ, ಅಶ್ಲೀಲನೃತ್ಯ ಮುಂತಾದವುಗಳನ್ನು ವಿಜೃಂಭಿಸುವ ದೃಶ್ಯಗಳಿರಬಾರದು.

v. ಚಲನಚಿತ್ರವು ತಾಂತ್ರಿಕವಾಗಿ ಕೆಳಮಟ್ಟದಲ್ಲಿರಬಾರದು, ಹಾಗೂ ಚಲನಚಿತ್ರ ನಿರ್ಮಾಣದ ಮೂಲಪಾಠಗಳಿಗೆ ಅಪಚಾರವೆಸಗುವಂತಿರಬಾರದು.

vi. ಸಮಾಜದ ಮೇಲೆ ವಿಶೇಷವಾಗಿ ವಿದ್ಯಾರ್ಥಿ/ಯುವ ಸಮುದಾಯದ ಮೇಲೆ ದುಷ್ಪರಿಣಾಮ ಬೀರುವ ಕಥೆ, ದೃಶ್ಯ, ನಿರೂಪಣೆ ಇರಬಾರದು. ಅಂತಹ ದೃಶ್ಯ, ಕಥೆ, ಸಂಭಾಷಣೆಯಿಂದ ಪ್ರಚೋದಿತರಾಗಿ ಅವುಗಳನ್ನು ನಿಜ ಜೀವನದಲ್ಲಿ ಅನುಸರಿಸುವಂತಹ ಕನಿಷ್ಠ ಪ್ರಚೋದನೆ ಇದ್ದರೂ ಸಹ ಅಂತಹ ಚಲನಚಿತ್ರಗಳು ಸಹಾಯಧನಕ್ಕೆ ಅನರ್ಹವಾಗುತ್ತವೆ.

ಮಕ್ಕಳ ಚಲನಚಿತ್ರಗಳ ಆಯ್ಕೆ :

(17) ಮಕ್ಕಳ ಚಲನಚಿತ್ರಗಳನ್ನು ವಿಶೇಷ ಪ್ರೋತ್ಸಾಹ ಸಹಾಯಧನಕ್ಕಾಗಿ ಆಯ್ಕೆ ಮಾಡುವಾಗ ಈ ಕೆಳಕಂಡ ಮಾನದಂಡವನ್ನು ಅನುಸರಿಸಬೇಕು.

i. ಮಕ್ಕಳ ಚಲನಚಿತ್ರವು ಪ್ರಧಾನವಾಗಿ ಮಕ್ಕಳ ವಿಷಯ ಕುರಿತ ಕಥಾವಸ್ತುವನ್ನು ಹೊಂದಿರಬೇಕು. ಮಕ್ಕಳ ಜೀವನ, ಪರಿಸರ ಮತ್ತು ಜಗತ್ತನ್ನು ಬಿಂಬಿಸಬೇಕು.

ii. ಚಿತ್ರವು ಕನಿಷ್ಟ 70 ನಿಮಿಷದ ಅವಧಿಯ ಚಿತ್ರವಾಗಿರಬೇಕು.

iii. ಚಲನಚಿತ್ರವು ಸೆನ್ಸಾರ್ ಮಂಡಳಿಯಿಂದ ಮಕ್ಕಳ ಚಿತ್ರವೆಂಬ ಪ್ರಮಾಣ ಪತ್ರವನ್ನು ಪಡೆದಿರಬಹುದು.

ಚಾರಿತ್ರಿಕ ಮತ್ತು ಪ್ರವಾಸಿತಾಣಗಳ ಚಲನಚಿತ್ರಗಳ ಆಯ್ಕೆ :

(18) ರಾಜ್ಯದ ಐತಿಹಾಸಿಕ ಪರಂಪರೆ ಬಿಂಬಿಸುವ ಚಾರಿತ್ರಿಕ ಹಾಗೂ ಪ್ರವಾಸಿತಾಣಗಳ ಕಥಾವಸ್ತುವುಳ್ಳ ಚಲನಚಿತ್ರಗಳನ್ನು ವಿಶೇಷ ಪ್ರೋತ್ಸಾಹ ಸಹಾಯಧನಕ್ಕೆ ಪರಿಗಣಿಸುವಾಗ ಈ ಕೆಳಕಂಡ ಅಂಶಗಳನ್ನು ಮಾನದಂಡಗಳಾಗಿ ಕಟ್ಟುನಿಟ್ಟಾಗಿ ಪರಿಗಣಿಸಬೇಕು.

i. ಈ ವಿಶೇಷ ಪ್ರೋತ್ಸಾಹ ಸಹಾಯಧನಕ್ಕೆ ಆಯ್ಕೆಯಾಗುವ ಚಲನಚಿತ್ರಗಳು 1947ಕ್ಕೆ ಹಿಂದಿನ ಕಥಾವಸ್ತುವುಳ್ಳ ಕರ್ನಾಟಕದ ಇತಿಹಾಸ, ಚರಿತ್ರೆ, ಪರಂಪರೆ, ನಾಡಿನ ಕಲೆ, ಸಂಸ್ಕೃತಿಯನ್ನು ಬಿಂಬಿಸುವ ಹಾಗೂ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿಹಿಡಿಯುವ ಚಿತ್ರಗಳಾಗಿರಬೇಕು.

ii. ರಾಜ್ಯದ ಪ್ರಮುಖ ಆಕರ್ಷಣೀಯ ಪಕ್ಷಿಧಾಮ, ವನ್ಯಸಂಕುಲ, ಜಲಪಾತ, ಐತಿಹಾಸಿಕ ಕೋಟೆಕೊತ್ತಲಗಳು, ಪಾರಂಪರಿಕ ತಾಣಗಳು ಸಮುದ್ರ ತೀರಗಳು, ಇತ್ಯಾದಿ ಪ್ರವಾಸಿ ಸ್ಥಳಗಳನ್ನು ಕೇಂದ್ರೀಕರಿಸಿ, ಕಥಾಚಿತ್ರದಲ್ಲಿ ಇವುಗಳನ್ನು ಪ್ರಧಾನವಾಗಿ ಅಳವಡಿಸಿಕೊಂಡು ಚಲನಚಿತ್ರವನ್ನು ನಿರ್ಮಿಸಿರಬೇಕು. ಪ್ರಾಸಂಗಿಕವಾಗಿ ಪ್ರವಾಸಿ ಸ್ಥಳಗಳಲ್ಲಿ ಧಾರ್ಮಿಕ ಕ್ಷೇತ್ರಗಳಲ್ಲಿ ಚಿತ್ರೀಕರಣಗೊಂಡಿದ್ದರೆ, ನಾಡಿನ ನಾನಾ ಯಾತ್ರಾ ಸ್ಥಳಗಳನ್ನು ಕೇವಲ ಪೂರಕವಾಗಿ ತೋರಿಕೆಗಾಗಿ ಚಲನಚಿತ್ರದಲ್ಲಿ ಚಿತ್ರೀಕರಿಸಿದ್ದರೆ ಅದನ್ನು ಅರ್ಹತೆಯನ್ನಾಗಿ ಪರಿಗಣಿಸಲಾಗುವುದಿಲ್ಲ.

iii. ಚಲನಚಿತ್ರವು ನಮ್ಮ ರಾಜ್ಯದ ಪ್ರವಾಸಿ ತಾಣಗಳನ್ನು ದೇಶ–ವಿದೇಶಗಳ ಪ್ರವಾಸಿಗರಿಗೆ ಪರಿಚಯಿಸುವಂತೆ ಹಾಗೂ ತನ್ಮೂಲಕ ಅವರನ್ನು ಆಕರ್ಷಿಸುವಂತೆ ನಿರ್ಮಿತವಾಗಿರಬೇಕು.

ಕರ್ನಾಟಕ ರಾಜ್ಯ ಚಲನಚಿತ್ರ ವಾರ್ಷಿಕ ಪ್ರಶಸ್ತಿ

(19) ಕರ್ನಾಟಕ ಸರ್ಕಾರವು ಕನ್ನಡ ಮತ್ತು ಕರ್ನಾಟಕದ ಪ್ರಾದೇಶಿಕ ಭಾಷೆಗಳಲ್ಲಿ ಉತ್ತಮ ಚಲನಚಿತ್ರಗಳ ನಿರ್ಮಾಣಕ್ಕೆ ಒತ್ತಾಸೆಯಾಗುವ, ಚಲನಚಿತ್ರ ಮಾಧ್ಯಮದ ಸೃಜನಶೀಲತೆ ಹಾಗೂ ಸಾಮಾಜಿಕ ಹೊಣೆಗಾರಿಕೆಯನ್ನು ಉತ್ತೇಜಿಸುವ ಹಾಗೂ ಸಮಾಜಮುಖಿಯಾದ ಸದಭಿರುಚಿಯ ಪ್ರಯತ್ನಗಳನ್ನು ಗುರುತಿಸುವ, ಸದುದ್ದೇಶದಿಂದ ಕರ್ನಾಟಕ ರಾಜ್ಯ ಚಲನಚಿತ್ರ ವಾರ್ಷಿಕ ಪ್ರಶಸ್ತಿಗಳನ್ನು ಸ್ಥಾಪಿಸಿದೆ.

(20) ಈ ಪ್ರಸಸ್ತಿಗಳ ಆಯ್ಕೆ ಮತ್ತು ಪ್ರಶಸ್ತಿ ಪ್ರಧಾನಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನಿಯಮಾವಳಿಗಳಿಗೆ ಅನುಗುಣವಾಗಿ ವಾರ್ತಾ ಇಲಾಖೆಯು ನಿರ್ವಹಿಸುತ್ತದೆ. ವಾರ್ಷಿಕ ಪ್ರಶಸ್ತಿಗಳು, ನಗದು ಬಹುಮಾನ ಇತ್ಯಾದಿ ವಿವರಗಳನ್ನು ಅನುಬಂಧ 1 ರಲ್ಲಿ ನೀಡಲಾಗಿದೆ.

ಪ್ರಶಸ್ತಿ ಪ್ರವೇಶಕ್ಕೆ ಅರ್ಹತೆ :

(21) ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಅಂದರೆ ಜನವರಿ 1 ರಿಂದ ಡಿಸೆಂಬರ್ 31 ರೊಳಗಿನ ಅವಧಿಯಲ್ಲಿ ಪ್ರಾದೇಶೀಕ ಚಲನಚಿತ್ರ ಸನ್ಸಾರ್ ಮಂಡಳಿಯಿಂದ ಪ್ರಮಾಣಪತ್ರ ಪಡೆದ ಕನ್ನಡ ಮತ್ತು ಕರ್ನಾಟಕದ ಪ್ರಾದೇಶಿಕ ಭಾಷಾ ಚಿತ್ರಗಳು ಆಯಾ ವರ್ಷದ ಪ್ರಶಸ್ತಿಗಳಿಗೆ ಸ್ಪರ್ಧಿಸಲು ಅರ್ಹವಾಗಿರುತ್ತವೆ.

(22) ಪ್ರತಿ ವರ್ಷ ಜನವರಿ ತಿಂಗಳಿನಲ್ಲಿ ಪ್ರಶಸ್ತಿಗಳಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗುವುದು. ಚಲನಚಿತ್ರಗಳ ನಿರ್ಮಾಪಕರು ವಾರ್ತಾ ಇಲಾಖೆಯು ನಿಗದಿಪಡಿಸಿದ ನಮೂನೆಯಲ್ಲಿ ನಿಗದಿತ ಪ್ರವೇಶ ಶುಲ್ಕದೊಡನೆ ಅರ್ಜಿ ಸಲ್ಲಿಸಬೇಕು.

(23) ಚಲನಚಿತ್ರಗಳನ್ನು ಡಿಜಿಟಲ್ ಅಥವಾ ಯಾವುದೇ ತಂತ್ರಜ್ಞಾನ, ವಿಧಾನ ಬಳಸಿ ನಿರ್ಮಿಸಿದ್ದರೂ ಸಹ ಅದನ್ನು ಅಂತಿಮವಾಗಿ 35 ಎಂ.ಎಂ. ಅದಕ್ಕಿಂತ ಹೆಚ್ಚಿನ ಅಳತೆಯ ಸೆಲ್ಯುಲಾಯಿಡ್ ರೂಪದಲ್ಲಿ ಮುದ್ರಿಸಿ ಪ್ರಶಸ್ತಿಗೆ ಸಲ್ಲಿಸಬೇಕು.

ಪ್ರಶಸ್ತಿ ಆಯ್ಕೆ ಸಮಿತಿ :

(24) ಕನ್ನಡ ಹಾಗೂ ಪ್ರಾದೇಶಿಕ ಭಾಷಾ ಚಲನಚಿತ್ರಗಳನ್ನು ವಾರ್ಷಿಕ ಪ್ರಶಸ್ತಿಗಳಿಗಾಗಿ ಆಯ್ಕೆ ಮಾಡಲು ಚಲನಚಿತ್ರ ಪರಿಣಿತರು ಹಾಗೂ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಪ್ರಶಸ್ತಿ ಆಯ್ಕೆ ಸಮಿತಿಯನ್ನು ರಚಿಸಲಾಗುವುದು.

i. ರಾಜ್ಯ ಸರ್ಕಾರವು ಪ್ರತಿವರ್ಷ ನೇಮಿಸುವ ಚಲನಚಿತ್ರ ಪರಿಣಿತರು ಮತ್ತು ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಕರ್ನಾಟಕ ರಾಜ್ಯ ಚಲನಚಿತ್ರಗಳ ವಾರ್ಷಿಕ ಪ್ರಶಸ್ತಿ ಆಯ್ಕೆ ಸಮಿತಿಯು ಪ್ರಶಸ್ತಿಗಳಿಗೆ ಚಲನಚಿತ್ರಗಳನ್ನು ಆಯ್ಕೆ ಮಾಡುತ್ತದೆ.

ii. ಪ್ರಶಸ್ತಿ ಆಯ್ಕೆ ಸಮಿತಿಯು ಅಧ್ಯಕ್ಷರು, ಸದಸ್ಯರುಗಳು ಮತ್ತು ಸದಸ್ಯ ಕಾರ್ಯದರ್ಶಿಯೂ ಸೇರಿದಂತೆ ಒಟ್ಟು 9 ಮಂದಿ ಸದಸ್ಯರನ್ನು ಒಳಗೊಂಡಿರುತ್ತದೆ.

iii. ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರು ಅಧಿಕಾರೇತರ ಸದಸ್ಯರಾಗಿದ್ದು, ಚಲನಚಿತ್ರ ರಂಗಕ್ಕೆ ಸಂಬಂಧಿಸಿದ ಸಂಗೀತ, ಸಾಹಿತ್ಯ ಅಥವಾ ವಿವಿಧ ಕಲಾ ಮತ್ತು ತಾಂತ್ರಿಕ ಪ್ರಕಾರಗಳಲ್ಲಿ ಪರಿಣಿತರೂ ಚಲನಚಿತ್ರ ಮಾಧ್ಯಮದ ಬಗ್ಗೆ ಆಳವಾದ ತಿಳಿವಳಿಕೆಯುಳ್ಳವರೂ ಆಗಿರಬೇಕು.

iv. ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯರನ್ನು ಚಲನಚಿತ್ರ ಕ್ಷೇತ್ರದ ವಿವಿಧ ವಿಭಾಗಗಳನ್ನು ಪ್ರತಿನಿಧಿಸುವಂತೆ ನೇಮಿಸಬೇಕು.

v. ವಾರ್ತಾ ಇಲಾಖೆಯ ನಿರ್ದೇಶಕರು ಅಥವಾ ಅವರಿಂದ ನಾಮನಿರ್ದೇಶಿತವಾದ, ಇಲಾಖೆಯ ಜಂಟಿ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ.

vi. ಸ್ಪರ್ಧೆಯಲ್ಲಿರುವ ಯಾವುದೇ ಚಲನಚಿತ್ರದೊಂದಿಗೆ ನೇರ ಅಥವಾ ಪರೋಕ್ಷ ಸಂಬಂಧವಿರುವವರು ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ, ಸದಸ್ಯರಾಗಿ ಅಥವಾ ಸದಸ್ಯಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವಂತಿಲ್ಲ.

vii. ನಿರ್ದಿಷ್ಟ ಚಲನಚಿತ್ರದೊಂದಿಗೆ ನೇರ ಅಥವಾ ಪರೋಕ್ಷ ಸಂಬಂಧವೆಂದರೆ, ಸ್ವತಃ ತಾವೇ ನಿರ್ಮಾಪಕರು, ಪಾಲುದಾರರು, ವಿತರಕರು, ಕಲಾವಿದರು ಅಥವಾ ತಂತ್ರಜ್ಞರು – ಹೀಗೆ ಯಾವುದೇ ರೂಪದಲ್ಲಿ ಭಾಗಿಯಾಗಿರಬಾರದು ಮತ್ತು ಇದೇ ರೀತಿಯಲ್ಲಿ ಅವರ ಸಂಬಂಧಿಗಳು ಯಾವುದೇ ರೂಪದಲ್ಲಿ ಭಾಗಿಯಾಗಿರಬಾರದು ಎಂದು ಅರ್ಥ. ಒಂದು ವೇಳೆ ಸೂಕ್ತ ಮಾಹಿತಿಯಿಲ್ಲದೆ ನೇರ ಅಥವಾ ಪರೋಕ್ಷ ಸಂಬಂಧವಿರುವವರು ಪ್ರಶಸ್ತಿ ಆಯ್ಕೆ ಸಮಿತಿಗೆ ನೇಮಕಗೊಂಡಿದ್ದರೆ, ಆಯ್ಕೆ ಸಮಿತಿಯ ಮೊದಲನೇ ಸಭೆಯಲ್ಲೇ ಇದನ್ನು ಪರಿಶೀಲಿಸಿ ಅಂಥವರನ್ನು ಸಮಿತಿಯಿಂದ ಕೈಬಿಡತಕ್ಕದ್ದು. ಇವರ ಬದಲಿಗೆ ಬೇರೊಬ್ಬರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಪ್ರಶಸ್ತಿ ಆಯ್ಕೆ ಸಮಿತಿಗೆ ಅಧಿಕಾರವಿರುತ್ತದೆ.

viii. ಅತ್ಯಗತ್ಯ ಸಂದರ್ಭಗಳಲ್ಲಿ ಗರಿಷ್ಠ ಒಬ್ಬರು ಪರಿಣಿತ ಸದಸ್ಯರನ್ನು ನಾಮನಿರ್ದೇಶನ ಮಾಡಿಕೊಳ್ಳುವ ಅಧಿಕಾರ ಪ್ರಶಸ್ತಿ ಆಯ್ಕೆ ಸಮಿತಿಗೆ ಇರುತ್ತದೆ.

ix. ಪ್ರಶಸ್ತಿ ನಿರ್ಣಯವು ಬಹುಮತ ಅಥವಾ ಸರ್ವಾನುಮತದಿಂದ ನಡೆಯತಕ್ಕದ್ದು. ಸಮಾನ ಮತಗಳು ಬಿದ್ದ ಸಂದರ್ಭದಲ್ಲಿ ಅಧ್ಯಕ್ಷರು ಎರಡನೇ ಮತವನ್ನು ನಿರ್ಣಾಯಕವಾಗಿ ಚಲಾಯಿಸಬಹುದು.

x. ಚಲನಚಿತ್ರ ಪ್ರಶಸ್ತಿಗೆ ಆಯ್ಕೆ ಮಾಡುವ ಕಾರ್ಯವಿಧಾನವನ್ನು ಪರಸ್ಪರ ಚರ್ಚೆಯೊಂದಿಗೆ ಪ್ರಶಸ್ತಿ ಆಯ್ಕೆ ಸಮಿತಿಯು ನಿರ್ಣಯಿಸಿಕೊಳ್ಳಬಹುದು. ಕಾರ್ಯವಿಧಾನ ಎಂದರೆ ದಿನಕ್ಕೆ ಎಷ್ಟು ಚಿತ್ರಗಳನ್ನು ವೀಕ್ಷಿಸಬೇಕು. ಚರ್ಚೆಯನ್ನು ಯಾವ್ಯಾವ ಹಂತದಲ್ಲಿ ಯಾವ ರೀತಿಯಲ್ಲಿ ಮಾಡಬೇಕು ಎಂಬಿತ್ಯಾದಿ ತಾಂತ್ರಿಕ ಅಂಶಗಳೇ ಹೊರತು ಪ್ರಶಸ್ತಿ ನಿರ್ಣಯಕ್ಕೆ ಮೂಲ ಮಾನದಂಡವಾಗುವ ಮಾರ್ಗಸೂಚಿಗಳನ್ನು ಪ್ರತಿವರ್ಷದ ಪ್ರಶಸ್ತಿ ಆಯ್ಕೆ ಸಮಿತಿಯು ತನಗೆ ತೋಚಿದಂತೆ ರೂಪಿಸಿಕೊಳ್ಳುವಂತಿಲ್ಲ.

ಪ್ರಶಸ್ತಿ ಆಯ್ಕೆಗಾಗಿ ಮಾರ್ಗಸೂಚಿಗಳು :

(25) ಕರ್ನಾಟಕ ರಾಜ್ಯ ಸರ್ಕಾರದ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ಈ ಕೆಳಕಂಡ ಅಂಶಗಳನ್ನು ಪ್ರಶಸ್ತಿ ಆಯ್ಕೆಗೆ ಪ್ರಧಾನವಾಗಿ ಪರಿಗಣಿಸಬೇಕು.

i. ಮಹಿಳೆಯನ್ನು ಕೀಳು ಅಭಿರುಚಿಯಲ್ಲಿ ಕಾಣುವ ಆಶಯವುಳ್ಳ ಹಾಗೂ ಅಶ್ಲೀಲತೆ ಮತ್ತು ಲೈಂಗಿಕ ವೈಪರೀತ್ಯಗಳ ತಳಹದಿಯ ಮೇಲೆ ನಿರ್ಮಾಣಗೊಂಡ ಚಿತ್ರಗಳನ್ನು ಪ್ರಶಸ್ತಿಗೆ ಪರಿಗಣಿಸಬಾರದು.

ii. ಯಾವುದೇ ರೀತಿಯ ಹಿಂಸೆಯನ್ನು ವೈಭವೀಕರಿಸುವ ಮತ್ತು ಹಿಂಸೆಯ ಪರವಾಗಿರುವ; ಜಾತಿವಾದ – ಕೋಮುವಾದವನ್ನು ಬೆಂಬಲಿಸುವ; ಸಮಾಜ ವಿರೋಧಿ ಚಟುವಟಿಕೆಗಳನ್ನು ಎತ್ತಿಹಿಡಿದು ಸಮರ್ಥಿಸುವ ಚಿತ್ರಗಳನ್ನು ಪ್ರಶಸ್ತಿಗೆ ಪರಿಗಣಿಸಬಾರದು.

iii. ಚಲನಚಿತ್ರವು ಮಹಿಳಾ ಸಮಸ್ಯೆ, ಲೈಂಗಿಕತೆ, ಹಿಂಸೆ, ಕೋಮು ಸಮಸ್ಯೆ ಮುಂತಾದ ಸೂಕ್ಷ್ಮ ವಸ್ತುಗಳನ್ನು ಒಳಗೊಂಡಿದೆಯೆಂಬ ಒಂದೇ ಕಾರಣದಿಂದ ಯಾವುದೇ ಚಿತ್ರವನ್ನು ಪ್ರಶಸ್ತಿಗಳ ಸ್ಪರ್ಧೆಯಿಂದ ದೂರ ಇಡುವಂತಿಲ್ಲ. ಇಂತಹ ವಸ್ತುಗಳನ್ನು ಒಳಗೊಂಡ ಚಿತ್ರಗಳು ಅಶ್ಲೀಲತೆ, ಲಿಂಗತಾರತಮ್ಯ, ಜಾತಿವಾದ, ಕೋಮುವಾದವನ್ನು ಒಳಗೊಂಡಂತೆ ಒಟ್ಟಾರೆಯಾಗಿ ಸಮಾಜ ವಿರೋಧಿ ಹಾಗೂ ಜನವಿರೋಧಿ ಆಶಯಗಳನ್ನು ಸಮರ್ಥಿಸಿದ್ದರೆ ಅಂತಹ ಚಿತ್ರಗಳನ್ನು ಪ್ರಶಸ್ತಿಗೆ ಪರಿಗಣಿಸಬಾರದು.

iv. ರಾಷ್ಟ್ರೀಯ ಸಮಗ್ರತೆಗೆ ಧಕ್ಕೆ ತರುವ ಮತೀಯ ಗಲಭೆಗಳನ್ನು ಪ್ರಚೋದಿಸುವ ಮತ್ತು ಯಾವುದೇ ರೀತಿಯ ಸಮಾಜವಿರೋಧಿ ಹಾಗೂ ಸದಭಿರುಚಿ ವಿರೋಧಿ ಆಶಯವುಳ್ಳ ಚಿತ್ರಗಳನ್ನು ಪುರಸ್ಕರಿಸಬಾರದು.

v. ಹಿಂಸೆ, ಲೈಂಗಿಕತೆ, ಕೋಮುಸಮಸ್ಯೆಯ ಅಂಶಗಳು ಚಲನಚಿತ್ರದಲ್ಲಿವೆ ಎನ್ನುವ ಏಕೈಕ ಕಾರಣದಿಂದಾಗಿ ಆ ಚಲನಚಿತ್ರವು ಪ್ರಶಸ್ತಿಗೆ ಅನರ್ಹವಾಗುವುದಿಲ್ಲ. ಇಂತಹ ವಸ್ತು ನಿರ್ವಹಣೆಯ ಅಂತಿಮ ಆಶಯವು ಸಮಾಜವಿರೋಧಿ ಸಮರ್ಥನೆಯನ್ನು ಒಳಗೊಂಡಿದೆಯೆಂಬ ಕಾರಣದಿಂದ ಪ್ರಶಸ್ತಿಗೆ ಅನರ್ಹವಾಗುತ್ತದೆ. ಆದ್ದರಿಂದ ಮೇಲೆ ಪ್ರಸ್ತಾಪಿತವಾದ ವಸ್ತುಗಳನ್ನು

ಒಳಗೊಂಡ ಚಿತ್ರಗಳು ಸ್ಪರ್ಧೆಯಲ್ಲಿದ್ದರೆ ಆಯಾ ವಸ್ತುವಿನ ನಿರ್ವಹಣೆ ಮತ್ತು ಪ್ರತಿಪಾದನೆಯು ಸಮಾಜವಿರೋಧಿ ನೆಲೆಗಳನ್ನು ಪಡೆದಿದೆಯೆ ಎಂಬ ವಿಷಯವನ್ನು ಅಭಿವ್ಯಕ್ತಿ ವಿಧಾನ, ನಿರ್ಣಯಾತ್ಮಕ ಪ್ರತಿಪಾದನೆ, ಅಂತಿಮ ಆಶಯ – ಮುಂತಾದ ಅಂಶಗಳನ್ನು ಪರಿಶೀಲಿಸಿ ಪ್ರಶಸ್ತಿ ಆಯ್ಕೆ ಸಮಿತಿಯು ತೀರ್ಮಾನಕ್ಕೆ ಬರುವುದು ಅಗತ್ಯ.

vi. ಸ್ಪರ್ಧೆಯಲ್ಲಿರುವ ಯಾವುದೇ ಚಿತ್ರವು ರೀಮೇಕ್, ಡಬ್ಬಿಂಗ್ ಎಂಬ ಅನುಮಾನವು ಆಯ್ಕೆ ಸಮಿತಿಗೆ ಬಂದಲ್ಲಿ ಸೂಕ್ತ ಪರಿಶೀಲನೆಯ ನಂತರ ಸಮಿತಿಯು ನಿರ್ಧಾರ ಕೈಗೊಳ್ಳುವುದು.

vii. ಪ್ರಶಸ್ತಿಗೆ ಆಯ್ಕೆಯಾಗುವ ಚಿತ್ರಗಳು ಚಲನಚಿತ್ರ ಮಾಧ್ಯಮದ ಮೂಲಭೂತ ತಾಂತ್ರಿಕ ತಿಳಿವಳಿಕೆಯನ್ನು ಒಳಗೊಂಡಿರಬೇಕು. ತಾಂತ್ರಿಕವಾಗಿ ತೀರಾ ಕೆಳಮಟ್ಟದಲ್ಲಿರಬಾರದು.

ರಾಷ್ಟ್ರೀಯ ಅಂತರರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ವಿಜೇತರಿಗೆ ಉತ್ತೇಜನ

(26) ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿ ವಿಜೇತ ಕನ್ನಡ ಹಾಗೂ ಕರ್ನಾಟಕದ ಇತರೆ ಪ್ರಾದೇಶಿಕ ಭಾಷಾ ಚಲನಚಿತ್ರಗಳಿಗೆ, ಕಲಾವಿದರಿಗೆ ಹಾಗೂ ತಂತ್ರಜ್ಞರಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಉತ್ತೇಜಕ ನಗದು ಬಹುಮಾನ ನೀಡಿ ಗೌರವಿಸಲಾಗುವುದು. (ಅನುಬಂಧ – II)

ಕರ್ನಾಟಕ ರಾಜ್ಯ ಚಲನಚಿತ್ರ ಸಾಹಿತ್ಯ ವಾರ್ಷಿಕ ಪ್ರಶಸ್ತಿ

(27) ಕನ್ನಡ ಚಲನಚಿತ್ರ ರಂಗದ ಬಗ್ಗೆ ಕನ್ನಡ ಭಾಷೆಯಲ್ಲಿ ಚಲನಚಿತ್ರ ಸಾಹಿತ್ಯದ ಕೊರತೆ ಇರುವುದನ್ನು ಮನಗಂಡು ಅದರ ಸಾಹಿತ್ಯ ರಚನೆಗೆ ಪ್ರೋತ್ಸಾಹ ನೀಡಲು ಕರ್ನಾಟಕ ರಾಜ್ಯ ಚಲನಚಿತ್ರ ಸಾಹಿತ್ಯ ವಾರ್ಷಿಕ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ.

ಪ್ರಶಸ್ತಿ ಆಯ್ಕೆ ಸಮಿತಿ :

(28) ಕರ್ನಾಟಕ ರಾಜ್ಯ ಚಲನಚಿತ್ರ ಸಾಹಿತ್ಯ ವಾರ್ಷಿಕ ಪ್ರಶಸ್ತಿ ಆಯ್ಕೆಗೆ ವಾರ್ತಾ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರ ಒಂದು ಆಯ್ಕೆ ಸಮಿತಿಯನ್ನು ರಚಿಸಿಕೊಳ್ಳಲು ಅಧಿಕಾರ ನೀಡಲಾಗಿದೆ.

ಅತ್ಯುತ್ತಮ ಚಲನಚಿತ್ರ ಪುಸ್ತಕ :

- ಪ್ರಶಸ್ತಿ ವಿಜೇತ ಲೇಖಕ/ಲೇಖಕಿಗೆ ಇಪ್ಪತ್ತು ಸಾವಿರ ರೂ.ಗಳ ನಗದು ಮತ್ತು ಬೆಳ್ಳಿ ಪದಕ ನೀಡಲಾಗುವುದು.
- ಒಬ್ಬರಿಗಿಂತ ಹೆಚ್ಚು ಲೇಖಕ/ಲೇಖಕಿಯರಿದ್ದರೆ ಪ್ರಶಸ್ತಿ ಮೊತ್ತವನ್ನು ಸಮನಾಗಿ ಹಂಚಲಾಗುವುದು.
- ಪುಸ್ತಕದ ಪ್ರಕಾಶಕರಿಗೆ ಇಪ್ಪತ್ತು ಸಾವಿರ ರೂ.ಗಳ ನಗದು ಮತ್ತು ಬೆಳ್ಳಿ ಪದಕ ನೀಡಲಾಗುವುದು.

ಪ್ರಶಸ್ತಿಗೆ ಅರ್ಹತೆ :

(29) ಚಲನಚಿತ್ರ ಸಾಹಿತ್ಯ ವಾರ್ಷಿಕ ಪ್ರಶಸ್ತಿಯು ಸಾಮಾನ್ಯವಾಗಿ ಕನ್ನಡ ಭಾಷೆಗೆ ಮಾತ್ರ ಸೀಮಿತವಾಗಿರುತ್ತದೆ. ಕನ್ನಡ ಭಾಷೆಯಲ್ಲಿ ಅರ್ಹ ಪುಸ್ತಕಗಳು ಲಭ್ಯವಿಲ್ಲದಿದ್ದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗುವ ಅರ್ಹ ಕೃತಿಗಳನ್ನು ಪ್ರಶಸ್ತಿಗೆ ಪರಿಗಣಿಸಬಹುದು.

i. ಆಯಾ ಕ್ಯಾಲೆಂಡರ್ ವರ್ಷದ ಜನವರಿ 1 ರಿಂದ ಡಿಸೆಂಬರ್ 31 ರೊಳಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವ ಚಲನಚಿತ್ರೋದ್ಯಮಕ್ಕೆ ಸಂಬಂಧಿಸಿದ ಪುಸ್ತಕಗಳು ಪ್ರಶಸ್ತಿ ಆಯ್ಕೆಗೆ ಅರ್ಹವಾಗುತ್ತವೆ.

ii. ಹಲವಾರು ಲೇಖನಗಳನ್ನು ಸಂಕ್ಷಿಪ್ತಗೊಳಿಸಿ, ಸಂಪಾದಿಸಿರುವ ಪುಸ್ತಕಗಳು ಪ್ರಶಸ್ತಿ ಆಯ್ಕೆಗೆ ಅರ್ಹತೆ ಹೊಂದಿರುವುದಿಲ್ಲ.

iii. ಒಬ್ಬರೇ ಲೇಖಕ/ಲೇಖಕಿಯು ಆಯಾ ವರ್ಷದಲ್ಲಿ ನಿಗದಿತ ಅವಧಿಯೊಳಗೆ ಬರೆದಿರುವ ಲೇಖನಗಳ ಸಂಗ್ರಹ ಪುಸ್ತಕವು ಪ್ರಶಸ್ತಿ ಆಯ್ಕೆಗೆ ಅರ್ಹತೆ ಹೊಂದುತ್ತದೆ.

ಏಕಗವಾಕ್ಷಿ ಚಿತ್ರೀಕರಣ ವ್ಯವಸ್ಥೆ

(30) ಕರ್ನಾಟಕ ರಾಜ್ಯಾದ್ಯಂತ ಚಲನಚಿತ್ರಗಳ ಚಿತ್ರೀಕರಣಕ್ಕೆ ಅನುಕೂಲವಾಗುವಂತೆ ವಾರ್ತಾ ಇಲಾಖೆಯು ಏಕಗವಾಕ್ಷಿ ವ್ಯವಸ್ಥೆಯ ಮೂಲಕ ಚಿತ್ರೀಕರಣಕ್ಕಾಗಿ ಅನುಮತಿ ಪತ್ರಗಳನ್ನು ವಿತರಿಸುತ್ತದೆ.

i. ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ನಿರ್ಬಂಧಿತ ಪ್ರದೇಶಗಳಲ್ಲಿ ಸಂಬಂಧಿಸಿದ ಸರ್ಕಾರಿ ಇಲಾಖೆ, ಸಂಸ್ಥೆಗಳ ಸಮ್ಮತಿಯೊಂದಿಗೆ ಚಿತ್ರೀಕರಣಕ್ಕೆ ಅನುಮತಿ ನೀಡುವ ಅಧಿಕಾರವನ್ನು ವಾರ್ತಾ ಇಲಾಖೆಯ ನಿರ್ದೇಶಕರು ಹೊಂದಿರುತ್ತಾರೆ.

ii. ಸಾರ್ವಜನಿಕ ಸ್ಥಳ ಮತ್ತು ಕಛೇರಿಗಳಲ್ಲಿ ಚಿತ್ರೀಕರಣಕ್ಕೆ ವಾರ್ತಾ ಇಲಾಖೆಯು ನೀಡಿರುವ ಅನುಮತಿ ಪತ್ರಕ್ಕೆ ಸಂಬಂಧಿಸಿದವರು ಮಾನ್ಯತೆ ನೀಡಬೇಕು.

iii. ಕನ್ನಡ ಹಾಗೂ ಕರ್ನಾಟಕದ ಪ್ರಾದೇಶಿಕ ಭಾಷೆಗಳ ಚಿತ್ರೀಕರಣಕ್ಕೆ ಒಂದು ವರ್ಷದ ಅವಧಿಗೆ 15,000 ರೂ.ಗಳ ಚಿತ್ರೀಕರಣ ಶುಲ್ಕವನ್ನು ನಿಗದಿಪಡಿಸಲಾಗಿದೆ. ಇದನ್ನು ಚಲನಚಿತ್ರ ನಿರ್ಮಾಪಕರುಗಳು ವಾರ್ತಾ ಇಲಾಖೆಗೆ ಪಾವತಿಸಬೇಕು. ಒಂದು ವರ್ಷದ ಅವಧಿಯ ನಂತರದ ಪ್ರತೀ ಮೂರು ತಿಂಗಳಿಗೆ 1,000 ರೂ.ಗಳಂತೆ ಹೆಚ್ಚುವರಿ ಶುಲ್ಕ ವಿಧಿಸಲಾಗುವುದು.

iv. ಕನ್ನಡ ಹಾಗೂ ಕರ್ನಾಟಕ ಪ್ರಾದೇಶಿಕ ಭಾಷೆಗಳ ಚಿತ್ರಗಳನ್ನು ಹೊರತುಪಡಿಸಿ ಇತರೆ ಭಾಷಾ ಚಲನಚಿತ್ರಗಳ ಹೊರಾಂಗಣ ಚಿತ್ರೀಕರಣಕ್ಕೆ ದಿನ ಒಂದಕ್ಕೆ 1,500 ರೂ.ಗಳ ಚಿತ್ರೀಕರಣ ಶುಲ್ಕವನ್ನು ನಿಗದಿಪಡಿಸಲಾಗಿದೆ.

v. ಏಕಗವಾಕ್ಷಿ ವ್ಯವಸ್ಥೆಯಡಿ ಇತರೆ ಇಲಾಖೆಗಳ ಮುಖ್ಯಸ್ಥರು, ನಿಗಮ, ಮಂಡಳಿಗಳು, ಜಿಲ್ಲಾಧಿಕಾರಿಗಳು ಮುಂತಾದವರು ಪ್ರತ್ಯೇಕವಾಗಿ ಚಿತ್ರೀಕರಣ ಶುಲ್ಕ ವಿಧಿಸುವುದನ್ನು ನಿರ್ಬಂಧಿಸಲಾಗಿದೆ. ಆದರೆ ವಾರ್ತಾ ಇಲಾಖೆಯೊಡನೆ ಸಮಾಲೋಚಿಸಿ ಚಿತ್ರೀಕರಣ ಸ್ಥಳದ ವಾಸ್ತವಿಕ ನಿರ್ವಹಣೆ ಮತ್ತು ಸ್ವಚ್ಛತಾ ಶುಲ್ಕ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

vi. ಚಿತ್ರೀಕರಣಕ್ಕೆ ಅನುಮತಿ ಪತ್ರ ನೀಡುವಾಗ ಸೂಕ್ತವೆನಿಸುವ ಷರತ್ತು, ನಿರ್ಬಂಧ ಹಾಗೂ ನಿರ್ವಹಣಾ ಶುಲ್ಕಗಳನ್ನು ವಿಧಿಸಲು ವಾರ್ತಾ ಇಲಾಖೆಯ ನಿರ್ದೇಶಕರಿಗೆ ಅಧಿಕಾರವಿರುತ್ತದೆ.

vii. ಇಲಾಖೆ/ನಿಗಮ/ಮಂಡಳಿಗಳ ವ್ಯಾಪ್ತಿಯಲ್ಲಿ ಬರುವ ಸ್ಥಳಗಳಲ್ಲಿ ಚಿತ್ರೀಕರಣ ಮಾಡುವ ಮುನ್ನ ಚಿತ್ರ ನಿರ್ಮಾಪಕರು ಭದ್ರತಾ ಠೇವಣಿಯಾಗಿ ರೂ. 25,000/– ಗಳನ್ನು ನಿರ್ದೇಶಕರು, ವಾರ್ತಾ ಇಲಾಖೆಯಲ್ಲಿ ಠೇವಣಿ ಇಡತಕ್ಕದ್ದು. ಚಿತ್ರೀಕರಣ ಮುಗಿದ ನಂತರ ಸಂಬಂಧಪಟ್ಟ ಇಲಾಖೆಗಳ/ನಿಗಮ/ಮಂಡಳಿಗಳ ಸ್ವತ್ತುಗಳಿಗೆ ಯಾವುದೇ ಹಾನಿಯಾಗಿಲ್ಲವೆಂದು ನಿರಾಕ್ಷೇಪಣಾ ಪತ್ರವನ್ನು ಚಲನಚಿತ್ರ ನಿರ್ಮಾಪಕರು/ಸಂಸ್ಥೆಗಳು ವಾರ್ತಾ ಇಲಾಖೆಗೆ ಒದಗಿಸಿದ ನಂತರ ಭದ್ರತಾ ಠೇವಣಿಯನ್ನು ಹಿಂದಕ್ಕೆ ನೀಡುವುದು.

viii. ಚಿತ್ರೀಕರಣಕ್ಕೆ ಅನುಮತಿ ನೀಡುವ ಸಂದರ್ಭದಲ್ಲಿ ಆಯಾಯ ಇಲಾಖೆಗಳ ರಕ್ಷಿತ ಪ್ರದೇಶ/ರಕ್ಷಿತಾ ಅರಣ್ಯ ಹಾಗೂ ವನ್ಯ ಜೀವಿ ಪ್ರದೇಶ/ನಿರ್ಬಂಧಿತ ಪ್ರದೇಶ ಇತ್ಯಾದಿಗಳಲ್ಲಿ ಚಲನಚಿತ್ರ ಚಿತ್ರೀಕರಣಕ್ಕೆ ನಿರ್ಬಂಧ ವಿಧಿಸಿದಲ್ಲಿ ಅದನ್ನು ಪಾಲಿಸುವುದು.

ix. ಚಿತ್ರೀಕರಣಕ್ಕೆ ಅನುಮತಿ ನೀಡಿದ ಜಾಗದಲ್ಲಿ ಪರಿಸರಕ್ಕೆ ಹಾನಿಯಾಗದಂತೆ ಹಾಗೂ ಪ್ರಾಚ್ಯ ವಸ್ತುಗಳನ್ನು ಬಿಸಾಡದೆ ಸ್ವಚ್ಛತೆಯನ್ನು ಕಾಪಾಡುವ ಜವಾಬ್ದಾರಿ ಹೊರತಕ್ಕದ್ದು. ತಪ್ಪಿದ್ದಲ್ಲಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಲು ನಿರ್ದೇಶಕರು, ವಾರ್ತಾ ಇಲಾಖೆ ಇವರು ಅಧಿಕಾರ ಹೊಂದಿರುತ್ತಾರೆ.

x. ಚಿತ್ರೀಕರಣಕ್ಕೆ ಅನುಮತಿ ನೀಡಿದಾಗ ಸಂಬಂಧಿಸಿದ ಜಿಲ್ಲಾಧಿಕಾರಿಗಳು/ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸಂಬಂಧಿಸಿದ ಪೊಲೀಸ್ ಠಾಣೆಗಳಿಗೆ ಮುಂಚಿತವಾಗಿ ಮಾಹಿತಿ ನೀಡಿ ಭದ್ರತೆ/ಸುರಕ್ಷತೆ ಬಗ್ಗೆ ಕ್ರಮ ಕೈಗೊಳ್ಳುವುದು.

ಚಲನಚಿತ್ರ ಶಿಕ್ಷಣ ಮತ್ತು ತರಬೇತಿ

(31) ಚಲನಚಿತ್ರ ಶಿಕ್ಷಣ ಮತ್ತು ತರಬೇತಿ ನೆಲೆಯನ್ನು ಸದೃಢ ಪಡಿಸುವುದು ಇಂದಿನ ಅಗತ್ಯವಾಗಿರುತ್ತದೆ. ಇದಕ್ಕಾಗಿ ಕರ್ನಾಟಕ ಚಲನಚಿತ್ರ ಅಕಾಡೆಮಿ ಹಾಗೂ ಆಸಕ್ತ ಸಂಘ ಸಂಸ್ಥೆಗಳಿಂದ ಚಲನಚಿತ್ರ ಶಿಕ್ಷಣ ಮತ್ತು ತರಬೇತಿಯ ಸುಧಾರಣೆಗೆ ಅಗತ್ಯವಾದ ಸಲಹೆ ಶಿಫಾರಸ್ಸುಗಳನ್ನು ಪಡೆದು ಅನುಷ್ಠಾನಗೊಳಿಸಲಾಗುವುದು.

ಮಿನಿ ಚಿತ್ರಮಂದಿರಗಳ ನಿರ್ಮಾಣಕ್ಕೆ ಸಹಾಯಧನ

(32) ಇತ್ತೀಚಿಗೆ ಟೆಲಿವಿಷನ್ ಮಾಧ್ಯಮದ ಪ್ರಭಾವದಿಂದಾಗಿ ಚಲನಚಿತ್ರ ವೀಕ್ಷಣೆಗಾಗಿ ಜನರು ಚಲನಚಿತ್ರ ಮಂದಿರಗಳಿಗೆ ಬರುವುದು ಕಡಿಮೆಯಾಗುತ್ತಿದೆ. ಇದರಿಂದಾಗಿ ರಾಜ್ಯದಲ್ಲಿ ಚಲನಚಿತ್ರ ಮಂದಿರಗಳ ನಿರ್ಮಾಣ ಸಂಖ್ಯೆ ಕುಸಿಯುತ್ತಿದೆ. ಇರುವ ಚಿತ್ರಮಂದಿರಗಳೂ ಸಹ ಮುಚ್ಚುವ ಭೀತಿಯನ್ನು ಎದುರಿಸುತ್ತಿವೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಮಿನಿ ಚಿತ್ರಮಂದಿರಗಳ ನಿರ್ಮಾಣಕ್ಕೆ ಒತ್ತಾಸೆ ನೀಡಲು ಮಿನಿ ಚಿತ್ರಮಂದಿರಗಳನ್ನು ನಿರ್ಮಿಸಲು ಮುಂದೆ ಬರುವ ಖಾಸಗಿಯವರಿಗೆ ಸಹಾಯಧನ ನೀಡುವ ಯೋಜನೆಯನ್ನು ಜಾರಿಗೊಳಿಸಲಾಗುವುದು.

ಚಲನಚಿತ್ರೋತ್ಸವಗಳ ಸಂಘಟನೆ

(33) ರಾಜ್ಯದಲ್ಲಿ ಏರ್ಪಡಿಸುವ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳ ಸಂಘಟನೆಗೆ ಸಹಯೋಗ ನೀಡುವುದು ಸರ್ಕಾರದ ಆಶಯವಾಗಿರುತ್ತದೆ. ಕರ್ನಾಟಕ ಚಲನಚಿತ್ರ ಅಕಾಡೆಮಿಯ ಮೂಲಕ ಇಂತಹ ಚಿತ್ರೋತ್ಸವಗಳನ್ನು ಸಂಘಟಿಸಲಾಗುವುದು.

ಅನುಬಂಧ–1

ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಳ ವಿವರ

1.	**ಮೊದಲನೆ ಅತ್ಯುತ್ತಮ ಚಿತ್ರ** ನಿರ್ಮಾಪಕ ಮತ್ತು ನಿರ್ದೇಶಕರಿಗೆ (ದಿ. ಹೆಚ್.ಎಲ್.ಎನ್. ಸಿಂಹ ಪ್ರಶಸ್ತಿ)	: ತಲಾ ಒಂದು ಲಕ್ಷ ರೂ.ಗಳ ನಗದು ಮತ್ತು ಚಿನ್ನದ ಪದಕ
2.	**ಎರಡನೇ ಅತ್ಯುತ್ತಮ ಚಿತ್ರ** ನಿರ್ಮಾಪಕ ಮತ್ತು ನಿರ್ದೇಶಕರಿಗೆ	: ತಲಾ ಎಪ್ಪತ್ತೈದು ಸಾವಿರ ರೂ.ಗಳ ನಗದು ಮತ್ತು ಬೆಳ್ಳಿ ಪದಕ
3.	**ಮೂರನೇ ಅತ್ಯುತ್ತಮ ಚಿತ್ರ** ನಿರ್ಮಾಪಕ ಮತ್ತು ನಿರ್ದೇಶಕರಿಗೆ	: ತಲಾ ಐವತ್ತು ಸಾವಿರ ರೂ.ಗಳ ನಗದು ಮತ್ತು ಬೆಳ್ಳಿ ಪದಕ
4.	**ವಿಶೇಷ ಸಾಮಾಜಿಕ ಕಾಳಜಿಯ ಚಿತ್ರ** ನಿರ್ಮಾಪಕ ಮತ್ತು ನಿರ್ದೇಶಕರಿಗೆ	: ತಲಾ ಎಪ್ಪತ್ತೈದು ಸಾವಿರ ರೂ.ಗಳ ನಗದು ಮತ್ತು ಬೆಳ್ಳಿ ಪದಕ
5.	**ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ** ನಿರ್ಮಾಪಕ ಮತ್ತು ನಿರ್ದೇಶಕರಿಗೆ	: ತಲಾ ಐವತ್ತು ಸಾವಿರ ರೂ.ಗಳ ನಗದು ಮತ್ತು ಬೆಳ್ಳಿ ಪದಕ
6.	**ಅತ್ಯುತ್ತಮ ಮಕ್ಕಳ ಚಿತ್ರ** ನಿರ್ಮಾಪಕ ಮತ್ತು ನಿರ್ದೇಶಕರಿಗೆ	: ತಲಾ ಐವತ್ತು ಸಾವಿರ ರೂ.ಗಳ ನಗದು ಮತ್ತು ಬೆಳ್ಳಿ ಪದಕ
7.	**ನಿರ್ದೇಶಕರ ಪ್ರಥಮ ನಿರ್ದೇಶನದ ಅತ್ಯುತ್ತಮ ಚಿತ್ರ ಪ್ರಶಸ್ತಿ** ನಿರ್ಮಾಪಕ ಮತ್ತು ನಿರ್ದೇಶಕರಿಗೆ	: ತಲಾ ಐವತ್ತು ಸಾವಿರ ರೂ.ಗಳ ನಗದು ಮತ್ತು ಬೆಳ್ಳಿ ಪದಕ
8.	**ಅತ್ಯುತ್ತಮ ಕರ್ನಾಟಕ ಪ್ರಾದೇಶಿಕ ಭಾಷಾ ಚಿತ್ರ** ನಿರ್ಮಾಪಕ ಮತ್ತು ನಿರ್ದೇಶಕರಿಗೆ	: ತಲಾ ಐವತ್ತು ಸಾವಿರ ರೂ.ಗಳ ನಗದು ಮತ್ತು ಬೆಳ್ಳಿ ಪದಕ
9.	**ಪುಟ್ಟಣ್ಣ ಕಣಗಾಲ್ ಪ್ರಶಸ್ತಿ** (ಕನ್ನಡ ಚಿತ್ರರಂಗಕ್ಕೆ ಅಪೂರ್ವ ಕೊಡುಗೆ ನೀಡಿದ ನಿರ್ದೇಶಕರಿಗೆ ನೀಡುವ ಜೀವಮಾನ ಸಾಧನೆ ಪ್ರಶಸ್ತಿ)	: ಎರಡು ಲಕ್ಷ ರೂ.ಗಳ ನಗದು ಮತ್ತು ಚಿನ್ನದ ಪದಕ
10.	**ಡಾ॥ ರಾಜ್‌ಕುಮಾರ್ ಪ್ರಶಸ್ತಿ** (ಕನ್ನಡ ಚಿತ್ರರಂಗದ ಸಮಗ್ರ ಬೆಳವಣಿಗೆಗೆ ಅಪೂರ್ವ ಕೊಡುಗೆ ನೀಡಿದ ಸಾಧಕರಿಗೆ ನೀಡುವ ಜೀವಿತಾವಧಿ ಸಾಧನೆ ಪ್ರಶಸ್ತಿ)	: ಎರಡು ಲಕ್ಷ ರೂ.ಗಳ ನಗದು ಮತ್ತು ಚಿನ್ನದ ಪದಕ
11.	**ಡಾ॥ ವಿಷ್ಣುವರ್ಧನ್ ಪ್ರಶಸ್ತಿ** (ಕನ್ನಡ ಚಲನಚಿತ್ರರಂಗದ ವಿವಿಧ ವಲಯಗಳಲ್ಲಿ ಅಪೂರ್ವ ಸಾಧನೆ ಮಾಡಿದ ಹಿರಿಯ ಚೇತನಗಳಿಗೆ ನೀಡುವ ಜೀವಮಾನ ಸಾಧನೆ ಪ್ರಶಸ್ತಿ)	: ಎರಡು ಲಕ್ಷ ರೂ.ಗಳ ನಗದು ಮತ್ತು ಚಿನ್ನದ ಪದಕ

ಈ ಕೆಳಕಂಡ ಎಲ್ಲಾ ವಿಭಾಗಗಳಲ್ಲಿ ಪ್ರಶಸ್ತಿ ಪಡೆಯುವ ಕಲಾವಿದರು/ತಂತ್ರಜ್ಞರಿಗೆ ತಲಾ ಇಪ್ಪತ್ತು ಸಾವಿರ ರೂ.ಗಳ ನಗದು ಹಾಗೂ ಬೆಳ್ಳಿ ಪದಕಗಳನ್ನು ನೀಡಲಾಗುವುದು.

12. **ಅತ್ಯುತ್ತಮ ನಟ (ಸುಬ್ಬಯ್ಯ ನಾಯ್ಡು ಪ್ರಶಸ್ತಿ)**
13. **ಅತ್ಯುತ್ತಮ ನಟಿ**
14. **ಅತ್ಯುತ್ತಮ ಪೋಷಕ ನಟ (ಕೆ.ಎಸ್. ಅಶ್ವತ್ ಪ್ರಶಸ್ತಿ)**
15. **ಅತ್ಯುತ್ತಮ ಪೋಷಕ ನಟಿ**
16. **ಅತ್ಯುತ್ತಮ ಕಥೆ**
17. **ಅತ್ಯುತ್ತಮ ಚಿತ್ರಕಥೆ**
18. **ಅತ್ಯುತ್ತಮ ಸಂಭಾಷಣೆ**
19. **ಅತ್ಯುತ್ತಮ ಛಾಯಾಗ್ರಹಣ**
20. **ಅತ್ಯುತ್ತಮ ಸಂಗೀತ ನಿರ್ದೇಶನ**
21. **ಅತ್ಯುತ್ತಮ ಧ್ವನಿಗ್ರಹಣ**
22. **ಅತ್ಯುತ್ತಮ ಸಂಕಲನ**
23. **ಅತ್ಯುತ್ತಮ ಬಾಲನಟ**
24. **ಅತ್ಯುತ್ತಮ ಬಾಲನಟಿ**

25. **ಅತ್ಯುತ್ತಮ ಕಲಾ ನಿರ್ದೇಶನ**
26. **ಅತ್ಯುತ್ತಮ ಗೀತರಚನೆ**
27. **ಅತ್ಯುತ್ತಮ ಹಿನ್ನೆಲೆ ಗಾಯಕ**
28. **ಅತ್ಯುತ್ತಮ ಹಿನ್ನೆಲೆ ಗಾಯಕಿ**
29. **ತೀರ್ಪುಗಾರರ ವಿಶೇಷ ಪ್ರಶಸ್ತಿ** (ಕ್ರಮಸಂಖ್ಯೆ 1 ರಿಂದ 7 ಮತ್ತು 10 ರಿಂದ 22 ರೊಳಗೆ ಸೇರಿಸಲ್ಪಡದಿರುವ ವಿಶೇಷ ತಾಂತ್ರಿಕ ವಿಷಯಗಳು, ವೇಷಭೂಷಣ, ಕಂಠದಾನ ಮತ್ತು ಇತರೆ ವಿಭಾಗಗಳಲ್ಲಿನ ಸಾಧನೆಗೆ ಗರಿಷ್ಠ ಒಂದು ಪ್ರಶಸ್ತಿ)

ಅನುಬಂಧ–2

ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ವಿಜೇತರಿಗೆ ಉತ್ತೇಜಕ ನಗದು ಬಹುಮಾನ

ಅಂತರರಾಷ್ಟ್ರೀಯ ಮತ್ತು ರಾಷ್ಟ್ರ ಪ್ರಶಸ್ತಿ ವಿಜೇತ ಕನ್ನಡ ಹಾಗೂ ಕರ್ನಾಟಕದ ಇತರೆ ಪ್ರಾದೇಶಿಕ ಭಾಷಾ ಚಲನಚಿತ್ರಗಳಿಗೆ, ಕಲಾವಿದರಿಗೆ ಹಾಗೂ ತಂತ್ರಜ್ಞರಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ನೀಡುವ ಉತ್ತೇಜಕ ನಗದು ಬಹುಮಾನ.

ಭಾರತ ಸರ್ಕಾರದ ರಾಷ್ಟ್ರೀಯ ವಾರ್ಷಿಕ ಪ್ರಶಸ್ತಿಗಳು

I **ಸ್ವರ್ಣ ಕಮಲ ಪ್ರಶಸ್ತಿ** (ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಕಥಾಚಿತ್ರಕ್ಕೆ ನೀಡುವ ಪ್ರಶಸ್ತಿ)

ನಿರ್ಮಾಪಕ	:	25.00 ಲಕ್ಷ ರೂ.ಗಳು
ನಿರ್ದೇಶಕ	:	3.00 ಲಕ್ಷ ರೂ.ಗಳು

II **ಸ್ವರ್ಣ ಕಮಲ ಹಾಗೂ ರಜತ ಕಮಲ ಪ್ರಶಸ್ತಿಗಳು**

ಈ ಕೆಳಕಂಡ ವಿಭಾಗಗಳಲ್ಲಿ ಅತ್ಯುತ್ತಮ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪಡೆದ ಕನ್ನಡ ಹಾಗೂ ಕರ್ನಾಟಕದ ಪ್ರಾದೇಶಿಕ ಭಾಷಾ ಚಲನಚಿತ್ರಗಳ ನಿರ್ಮಾಪಕರಿಗೆ ತಲಾ 5 ಲಕ್ಷ ರೂ.ಗಳು ಮತ್ತು ನಿರ್ದೇಶಕರಿಗೆ ತಲಾ 1 ಲಕ್ಷ ರೂ.ಗಳ ಉತ್ತೇಜಕ ನಗದು ಬಹುಮಾನ :

1) ನಿರ್ದೇಶಕರ ಪ್ರಥಮ ನಿರ್ದೇಶನದ ಅತ್ಯುತ್ತಮ ಚಿತ್ರ
2) ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ
3) ಅತ್ಯುತ್ತಮ ರಾಷ್ಟ್ರೀಯ ಭಾವೈಕ್ಯತಾ ಚಿತ್ರ
4) ಅತ್ಯುತ್ತಮ ಕೌಟುಂಬಿಕ ಕಲ್ಯಾಣ ಚಿತ್ರ
5) ಅತ್ಯುತ್ತಮ ಸಾಮಾಜಿಕ ಸಮಸ್ಯೆ ಬಿಂಬಿಸುವ ಚಿತ್ರ
6) ಅತ್ಯುತ್ತಮ ಪರಿಸರ ಸಂರಕ್ಷಣೆ ಚಿತ್ರ
7) ಅತ್ಯುತ್ತಮ ಮಕ್ಕಳ ಚಿತ್ರ
8) ಅತ್ಯುತ್ತಮ ಪ್ರಾದೇಶಿಕ ಕಥಾ ಚಿತ್ರ
9) ತೀರ್ಪುಗಾರರ ವಿಶೇಷ ಮನ್ನಣೆ ಪಡೆದ ಕನ್ನಡ ಹಾಗೂ ಪ್ರಾದೇಶಿಕ ಭಾಷಾ ಚಿತ್ರ

II **ಸ್ವರ್ಣ ಕಮಲ / ರಜತ ಕಮಲ (ವೈಯಕ್ತಿಕ ಪ್ರಶಸ್ತಿಗಳು)**

ಈ ಕೆಳಕಂಡ ವಿಭಾಗಗಳಲ್ಲಿ ಅತ್ಯುತ್ತಮ ರಾಷ್ಟ್ರೀಯ ಪ್ರಶಸ್ತಿ ಪಡೆಯುವ ನಿರ್ದೇಶಕ, ಕಲಾವಿದ, ಮತ್ತು ತಂತ್ರಜ್ಞರಿಗೆ ತಲಾ ಎರಡು ಲಕ್ಷ ರೂ.ಗಳ ಉತ್ತೇಜಕ ನಗದು ಬಹುಮಾನ.

1) ಅತ್ಯುತ್ತಮ ನಿರ್ದೇಶನ
2) ಅತ್ಯುತ್ತಮ ನಟ/ನಟಿ
3) ಅತ್ಯುತ್ತಮ ಪೋಷಕ ನಟ/ನಟಿ
4) ಅತ್ಯುತ್ತಮ ಬಾಲ ನಟ/ನಟಿ
5) ಅತ್ಯುತ್ತಮ ಹಿನ್ನೆಲೆ ಗಾಯಕ/ಗಾಯಕಿ
6) ಅತ್ಯುತ್ತಮ ಛಾಯಾಗ್ರಹಣ
7) ಅತ್ಯುತ್ತಮ ಚಿತ್ರಕಥೆ
8) ಅತ್ಯುತ್ತಮ ಧ್ವನಿಗ್ರಹಣ
9) ಅತ್ಯುತ್ತಮ ಸಂಕಲನ
10) ಅತ್ಯುತ್ತಮ ಕಲಾ ನಿರ್ದೇಶನ
11) ಅತ್ಯುತ್ತಮ ವಸ್ತ್ರವಿನ್ಯಾಸ
12) ಅತ್ಯುತ್ತಮ ಸಂಗೀತ ನಿರ್ದೇಶನ
13) ಅತ್ಯುತ್ತಮ ಚಿತ್ರಸಾಹಿತ್ಯ
14) ಅತ್ಯುತ್ತಮ ವಿಶೇಷ ತಾಂತ್ರಿಕ ಪರಿಣಿತಿ (ಸ್ಪೆಷಲ್ ಎಫೆಕ್ಟ್)
15) ಅತ್ಯುತ್ತಮ ನೃತ್ಯಸಂಯೋಜನೆ

ಅಂತರರಾಷ್ಟ್ರೀಯ/ರಾಷ್ಟ್ರೀಯ ಚಿತ್ರೋತ್ಸವ ಹಾಗೂ ಪನೋರಮಾ ವಿಭಾಗಕ್ಕೆ ಆಯ್ಕೆಯಾಗಿ–ಮನ್ನಣೆ ಪಡೆದ ಚಿತ್ರಗಳಿಗೆ ಉತ್ತೇಜಕ ನಗದು ಬಹುಮಾನ

ಅಧಿಕೃತ ಮನ್ನಣೆ ಪಡೆದ (FIAPE) ಅಂತರರಾಷ್ಟ್ರೀಯ/ರಾಷ್ಟ್ರೀಯ ಚಿತ್ರೋತ್ಸವಗಳಿಗೆ ಹಾಗೂ ಪನೋರಮ ವಿಭಾಗಕ್ಕೆ ಆಯ್ಕೆಯಾಗಿ ಪ್ರದರ್ಶನಗೊಂಡ ಕನ್ನಡ ಹಾಗೂ ಪ್ರಾದೇಶಿಕ ಭಾಷಾ ಚಿತ್ರಗಳ, ನಿರ್ಮಾಪಕರಿಗೆ ತಲಾ ಮೂರು ಲಕ್ಷ ರೂ.ಗಳು ಮತ್ತು ನಿರ್ದೇಶಕರಿಗೆ ತಲಾ ಎಪ್ಪತ್ತೈದು ಸಾವಿರ ರೂ.ಗಳ ನಗದು ಬಹುಮಾನ. ಇದೇ ಮನ್ನಣೆಗೆ ಪಾತ್ರವಾಗುವ ಆದರೆ ಡಿಜಿಟಲ್ ತಂತ್ರಜ್ಞಾನದಲ್ಲಿ ನಿರ್ಮಿಸಿದ ಚಲನಚಿತ್ರ ನಿರ್ಮಾಪಕರಿಗೆ ತಲಾ ಒಂದು ಲಕ್ಷ ರೂ. ಮತ್ತು ನಿರ್ದೇಶಕರಿಗೆ ತಲಾ ಐವತ್ತು ಸಾವಿರ ರೂ.ಗಳ ನಗದು ಬಹುಮಾನ.

ಕೆ. ಸುಧಾಕರ ಶೆಟ್ಟಿ,
ಸರ್ಕಾರದ ಉಪ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.

ಪಿ.ಆರ್. 885